ಬಳ್ಳಾರಿ । ವಿಜಯನಗರ । ಕೊಪ್ಪಳ । ಬೆಂಗಳೂರು । ದಾವಣಗೆರೆ । ಹುಬ್ಬಳ್ಳಿ

ದಾವಣಗೆರೆ । ಹಾವೇರಿ । ಗದಗ । ರಾಯಚೂರು । ವಿಜಯನಗರ । ತುಮಕೂರು

# ಅನಂತ ಜನಶಕ್ತಿ

ANANTA JANASHAKTHI — KANNADA DAILY NEWS PAPER

ಸಂಪಾದಕ: ಎಸ್.ವೆಂಕಟೇಸುಲು | ಬಳ್ಳಾರಿ ಜಿಲ್ಲೆಯಿಂದ ಪ್ರಕಟಿತ ಕನ್ನಡ ದೈನಿಕ | EDITOR : S VENKATESULU

ಸಂಪುಟ : 01 ಸಂಚಿಕೆ : 68 ರಿ.ನಂ : ಕೆಎನ್ಎಎನ್ / 26 / ಎ5487 ಬಳ್ಳಾರಿ ಮಂಗಳವಾರ ದಿನಾಂಕ : 22-09-2026 ಪುಟ : 04 ಬೆಲೆ : 2-00

## ಮೂರು ದಿನ ಬ್ಯಾಂಕ್ ಮುಷ್ಕರ




ನವದೆಹಲಿ: ಸೆಪ್ಟೆಂಬರ್ 28 ರಿಂದ ಮೂರು ದಿನಗಳ ರಾಷ್ಟ್ರವ್ಯಾಪಿ ಬ್ಯಾಂಕ್ ಮುಷ್ಕರದ ಹಿನ್ನೆಲೆಯಲ್ಲಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ತನ್ನ ಗ್ರಾಹಕರಿಗೆ ಸಲಹೆಯೊಂದನ್ನು ನೀಡಿದೆ.

ಮುಷ್ಕರದ ಅವಧಿಯಲ್ಲಿ ಉಂಟಾಗಬಹುದಾದ ಅಡಚಣೆಗಳನ್ನು ತಪ್ಪಿಸಲು, ಶಾಖೆಗೆ ಸಂಬಂಧಿಸಿದ ಪ್ರಮುಖ ಕೆಲಸಗಳನ್ನು ಮುಂಚಿತವಾಗಿಯೇ ಪೂರ್ಣಗೊಳಿಸುವಂತೆ ಬ್ಯಾಂಕ್ ಗ್ರಾಹಕರಿಗೆ ಕೋರಿದೆ. ಸೆ. 28, 29, 30 ರಂದು ರಾಷ್ಟ್ರವ್ಯಾಪಿ ಬ್ಯಾಂಕ್ ಮುಷ್ಕರ ನಡೆಯಲಿದೆ. ಸೆ. 26, 27ರಂದು ವಾರಾಂತ್ಯ ರಜೆ ಇರಲಿದೆ. ಹೀಗಾಗಿ, ಸತತ 5 ದಿನ ಶಾಖಾ ಸೇವೆಗೆ ಅಡಚಣೆ ಉಂಟಾಗುವ ಸಾಧ್ಯತೆಯಿದೆ. ಮುಷ್ಕರಕ್ಕೂ ಮುನ್ನ ಪ್ರಮುಖ ಬ್ಯಾಂಕಿಂಗ್ ಕೆಲಸ ಮುಗಿಸಲು ಎಸ್‌ಬಿಐ ಸಲಹೆ ನೀಡಿದೆ.

## ಸೌಜನ್ಯಾ ಪ್ರಕರಣ ಮರುತನಿಖೆಗೆ ಸುಪ್ರೀಂ ಆದೇಶ





ನವದೆಹಲಿ: ಧರ್ಮಸ್ಥಳದ ಸೌಜನ್ಯಾ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ಮರುತನಿಖೆಗೆ ಸೋಮವಾರ ಆದೇಶಿಸಿರುವ ಸುಪ್ರೀಂ ಕೋರ್ಟ್, ಮೂರು ತಿಂಗಳ ಗಡುವು ನೀಡಿದೆ.

ಪ್ರಕರಣದ ತನಿಖೆ ನಡೆಸಿದ್ದ ಕೇಂದ್ರ ತನಿಖಾ ದಳ (ಸಿಬಿಐ), ಆರೋಪಿಗಳನ್ನು ಖುಲಾಸೆಗೊಳಿಸಿತ್ತು. ಹೀಗಾಗಿ, ಸೌಜನ್ಯಾ ತಾಯಿ ಕುಸುಮಾವತಿ ಗೌಡ ಹೈಕೋರ್ಟ್ ಮೆಟ್ಟಿಲೇರಿದ್ದರು. ಮರುತನಿಖೆಗೆ ಮನವಿ ಮಾಡಿದ್ದ ಅವರ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ಆ ಬಳಿಕ ಅವರು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಕಳಪೆ ಹಾಗೂ ಸ್ವತಂತ್ರವಲ್ಲದ ಪರಾವಲಂಬಿ ತನಿಖೆ ನಡೆಸಲಾಗಿದೆ ಎಂದು ಸಿಬಿಐಗೆ ಜುಲೈನಲ್ಲಿ ತರಾಟೆ ತೆಗೆದುಕೊಂಡಿದ್ದ ಕೋರ್ಟ್, ತೀರ್ಪನ್ನು ಕಾಯ್ದಿರಿಸಿತ್ತು.

'ವಾಸ್ತವವಾಗಿ, ಸಿಬಿಐನ ತನಿಖಾ ಅಧಿಕಾರಿ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿದ್ದಾರೆ. ಹಿಂದೆ ಸಂಗ್ರಹಿಸಿದ ಸಾಕ್ಷ್ಯಗಳನ್ನು ಪರಿಶೀಲಿಸಿ ಅವರು ತಮ್ಮ ವರದಿ ಸಲ್ಲಿಸಿದ್ದಾರೆ. ಅವರು ಯಾವುದೇ ಸ್ವತಂತ್ರ ತನಿಖೆ ನಡೆಸಿಲ್ಲ' ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಹಾಗೂ ಸಂಜೀವ್ ಸಚ್‌ದೇವ್ ಅವರಿದ್ದ ಪೀಠ ಹೇಳಿತ್ತು.

# 'ವಂದೇ ಮಾತರಂ' ಗದ್ದಲ



ಬೆಂಗಳೂರು : ರಾಜ್ಯ ವಿಧಾನಮಂಡಲದ ಮೂರು ದಿನಗಳ ವಿಶೇಷ ಅಧಿವೇಶನದ ಮೊದಲ ದಿನವೇ 'ವಂದೇ ಮಾತರಂ' ಗೀತೆಯ ಗಾಯನ ವಿಚಾರವಾಗಿ ಆಡಳಿತ ಪಕ್ಷ ಮತ್ತು ಬಿಜೆಪಿ ಸದಸ್ಯರ ನಡುವೆ ಗದ್ದಲ ಉಂಟಾಯಿತು.

ಅಧಿವೇಶನದ ಆರಂಭದಲ್ಲಿ ಅಧಿಕೃತವಾಗಿ ಪ್ರಸಾರವಾದ 'ವಂದೇ ಮಾತರಂ' ಗೀತೆಯನ್ನು ಎರಡು ಚರಣಗಳ ಬಳಿಕ ನಿಲ್ಲಿಸಲಾಯಿತು. ಬಳಿಕ ಸಭಾಧ್ಯಕ್ಷರು ಸಂತಾಪ ಸೂಚನಾ ನಿರ್ಣಯಕ್ಕೆ ಅವಕಾಶ ನೀಡಿದರು.

ಎರಡು ಚರಣಗಳ ಬಳಿಕ ಗೀತೆ ನಿಂತಿದ್ದಕ್ಕೆ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿ, ಸದನದಲ್ಲಿ ಸಂಪೂರ್ಣ 'ವಂದೇ ಮಾತರಂ' ಗೀತೆಯನ್ನು ಹಾಡಲು ಆರಂಭಿಸಿದರು. ವಿಧಾನ

2ನೇ ಪುಟಕ್ಕೆ...

## ಸರ್ಕಾರದ ಚಳಿ ಬಿಡಿಸುತ್ತೇವೆ: ವಿಪಕ್ಷ ನಾಯಕ ಅಶೋಕ್



ಬೆಂಗಳೂರು: ಇದು ದಪ್ಪ ಚರ್ಮದ ಸರ್ಕಾರ. ಈ ಸರ್ಕಾರಕ್ಕೆ ಚಳಿ ಬಿಡಿಸುವ ಮತ್ತು ಕಿವಿ ಹಿಂಡುವ ಕೆಲಸವನ್ನು ಸದನದಲ್ಲಿ ಮಾಡೇ ಮಾಡುತ್ತೇವೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಹೇಳಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಇವರು, ಕಳೆದ ಬಾರಿ ನಾವು ವಿಧಾನಸಭೆ ಕಲಾಪದಲ್ಲಿ ಈ ಸರ್ಕಾರಕ್ಕೆ ಚಳಿ ಬಿಡಿಸಿದ್ದೆವು. ನಮ್ಮ ಹೋರಾಟದಿಂದ ಒಂದು ವಿಕೆಟ್ ಬಿದ್ದು ಹೋಯಿತು. ಈ ಬಾರಿಯೂ ವಿರೋಧ ಪಕ್ಷವಾಗಿ


2ನೆ ಪುಟಕ್ಕೆ...

# ರಾಮ ಮಂದಿರದಲ್ಲಿ 105 ಬಾರಿ ಕಾಣಿಕೆ ಕಳವು,

## ಸೆ.25ರ ಒಳಗಡೆ ಚಾರ್ಜ್‌ಶೀಟ್ ಸಲ್ಲಿಕೆ: ಸುಪ್ರೀಂಗೆ ಎಸ್ಐಟಿ

ನವದೆಹಲಿ: ಅಯೋಧ್ಯೆಯ ರಾಮ ಮಂದಿರದಲ್ಲಿಭಕ್ತರು ಸಮರ್ಪಿಸಿದ ದೇಣಿಗೆ ಹಣ ಮತ್ತು ಚಿನ್ನಾಭರಣಗಳ ಕಳವಿಗೆ ಸಂಬಂಧಿಸಿದಂತೆ ದೇವಸ್ಥಾನದ ಸಿಸಿಟಿವಿ ಕ್ಯಾಮೆರಾಗಳಲ್ಲಿ 105 ಬಾರಿ ಕಳ್ಳತನದ ದೃಶ್ಯಗಳು ಸೆರೆಯಾಗಿವೆ ಎಂಬ ಆಘಾತಕಾರಿ ಅಂಶವನ್ನು ವಿಶೇಷ ತನಿಖಾ ತಂಡಸುಪ್ರೀಂ ಕೋರ್ಟ್‌ಗೆತಿಳಿಸಿದೆ.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಎಸ್‌ಐಟಿ ಸಿದ್ಧಪಡಿಸಿರುವ ಪ್ರಗತಿ ವರದಿಯ ವಿವರಗಳನ್ನು ಇಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದರು. ತನಿಖೆ ಬಹುತೇಕ



ಪೂರ್ಣಗೊಂಡಿದ್ದು, ಸೆಪ್ಟೆಂಬರ್ 25ರೊಳಗೆ ದೋಷಾರೋಪ ಪಟ್ಟಿಸಲ್ಲಿಸಲಾಗುವುದು ಎಂದು ಮೆಹ್ತಾ ನ್ಯಾಯಪೀಠಕ್ಕೆ ಮಾಹಿತಿ ನೀಡಿದರು. ಚಾರ್ಜ್‌ಶೀಟ್ ಸಲ್ಲಿಕೆಯಾದ ಬಳಿಕ ಕಾನೂನು ಪ್ರಕಾರ ಮುಂದಿನ ಕ್ರಮ ಕೈಗೊಳ್ಳುವಂತೆ ಮ್ಯಾಜಿಸ್ಟ್ರೇಟ್‌ಗೆ ನ್ಯಾಯಾಲಯ ಸೂಚಿಸಿದೆ.

ಕಾಣಿಕೆ ಕಳವು ಆರೋಪಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ಸಲ್ಲಿಸಿದ ಸ್ಥಿತಿಗತಿ ವರದಿಯನ್ನು ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ಪೀಠ ಪರಿಶೀಲಿಸಿತು.

2ನೆ ಪುಟಕ್ಕೆ...

## ಹರೀಶ್ ವಿರುದ್ಧ ಹಾಯ್ದು ಸ್ವಪಕ್ಷೀಯರ ದಂಗೆ: ಮಾಡಾಳ್ ಕಿಡಿ






ದಾವಣಗೆರೆ: ಹರಿಹರ ಬಿಜೆಪಿ ಶಾಸಕ ಬಿ. ಪಿ. ಹರೀಶ್ ವಿರುದ್ದ ಸ್ವಪಕ್ಷೀಯರೇ ದಂಗೆ ಎದ್ದಿದ್ದಾರೆ. ಮಾಜಿ ಸಚಿವ ಎಂ. ಪಿ. ರೇಣುಕಾಚಾರ್ಯ ಬಣವು ಹಾಲಿ ಶಾಸಕರ ವಿರುದ್ಧವೇ ಧ್ವನಿ ಎತ್ತಿದೆ. ಭದ್ರಾ ಡ್ಯಾಂ ನೀರಿನ ವಿಚಾರದಲ್ಲಿ ರೇಣುಕಾಚಾರ್ಯ ಬಣವು ನೀರು ಹರಿಸುವುದು ಬೇಡ ಎಂದಿದ್ದ ಬಿ. ಪಿ. ಹರೀಶ್ ಗೆ ಟಾಂಗ್ ನೀಡಿದೆ. ಮಾತ್ರವಲ್ಲ,

2ನೇ ಪುಟಕ್ಕೆ...

## ಇಂದು ಸಂಚಾರ ಬದಲಾವಣೆ





ದಾವಣಗೆರೆ : ನಗರದ ವಿನೋಬನಗರ 2ನೇ ಮುಖ್ಯರಸ್ತೆಯಲ್ಲಿ ಪ್ರತಿಷ್ಠಾಪಿಸಲಾಗಿರುವ ಗಣೇಶ ಮೂರ್ತಿಯ ವಿಸರ್ಜನಾ ಮೆರವಣಿಗೆ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ

2ನೇ ಪುಟಕ್ಕೆ...

## ಬರಪಟ್ಟಿಗೆ ಸೇರಿಸುವಂತೆ ಜಗಳೂರು ಬಂದ್:

### ವಾಹನ ಸಂಚಾರ ಸ್ಥಗಿತ; ಬಸ್ ಗ್ಲಾಸ್ ಒಡೆದ ಬಿಜೆಪಿ ಕಾರ್ಯಕರ್ತರು



ಜಗಳೂರು : ಬರ ಪೀಡಿತ ಪಟ್ಟಿಗೆ ಜಗಳೂರು ಸೇರಿಸದ ಹಿನ್ನೆಲೆಯಲ್ಲಿ ರೈತರು ಹಾಗೂ ಬಿಜೆಪಿ ತಾಲೂಕು ಘಟಕದಿಂದ ಸೋಮವಾರ ಜಗಳೂರು ಬಂದ್‌ಗೆ ಕರೆ ನೀಡಲಾಗಿದೆ.

ಬಸ್ ಹಾಗೂ ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದ್ದು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ನಡೆದುಕೊಂಡು ಬರುತ್ತಿರುವ ದೃಶ್ಯಗಳು ಕಂಡುಬಂದವು. ಅಲ್ಲದೆ ಜಗಳೂರು ಎಪಿಎಂಸಿ ಸಂಪೂರ್ಣ ಬಂದ್ ಆಗಿದ್ದು, ಎಪಿಎಂಸಿ ಗೇಟ್ ಮುಂದೆ ನಿಂತು ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನಾನಿರತರು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಕಾರ್ಯಕರ್ತರು, ರೈತರು ಪಟ್ಟಣದಾದ್ಯಂತ ಪ್ರತಿಭಟನೆ ನಡೆಸುತ್ತಿದ್ದಾರೆ.

ಕೊಟ್ಟೂರು ರಸ್ತೆ, ದೊಣ್ಣೆಹಳ್ಳಿ-ಜಗಳೂರು ರಸ್ತೆ, ದಾವಣಗೆರೆ-ಜಗಳೂರು ರಸ್ತೆ



ಹೀಗೆ ಎಲ್ಲಾ ಕಡೆ ರಸ್ತೆ ಬಂದ್ ಮಾಡಿ ಕಾರ್ಯಕರ್ತರು ಆಕ್ರೋಶ ಹೊರಹಾಕಿದರು. ಬಸ್ ಇಲ್ಲದೆ ಬಾಣಂತಿ ಮಹಿಳೆಯು ಮಗು ಜೊತೆ ನಡೆದುಕೊಂಡು ಹೋಗುತ್ತಿದ್ದ ದೃಶ್ಯ ಕಂಡುಬಂತು.

ಈ ವೇಳೆ ಮಾಜಿ ಶಾಸಕ ಎಸ್. ವಿ. ರಾಮಚಂದ್ರಪ್ಪ ಅವರು ಪ್ರತಿಭಟನೆಯಲ್ಲಿ ಭಾ-ಗಿಯಾಗಿ ರಾಜ್ಯ ಸರ್ಕಾರ ಹಾಗೂ ಸ್ಥಳೀಯ ಶಾಸಕ ಬಿ. ದೇವೇಂದ್ರಪ್ಪ ಅವರ ವಿರುದ್ಧ

3ನೇ ಪುಟಕ್ಕೆ...

## ಮಹಿಳೆಯರ ಉನ್ನತ ಶಿಕ್ಷಣ, ಸಬಲೀಕರಣಕ್ಕೆ ಸಂಸ್ಥೆಯ ಮಹತ್ವದ ಸೇವೆ



ಬಳ್ಳಾರಿ : ಮಹಿಳೆಯರಿಗೆ ಉನ್ನತ ಶಿಕ್ಷಣದ ಅವಕಾಶ ಕಲ್ಪಿಸುವ ಮೂಲಕ ಅವರನ್ನು ಸಬಲೀಕರಣಗೊಳಿಸುವಲ್ಲಿ ವೀರಶೈವ ವಿದ್ಯಾವರ್ಧಕ ಸಂಘದ ಅಲ್ಲಂ ಸುಮಂಗಳಮ್ಮ ಮಹಿಳಾ ಕಾಲೇಜು ಮಹತ್ವದ ಸೇವೆ ಸಲ್ಲಿಸುತ್ತಿದೆ ಎಂದು ಗಣ್ಯರು ಹೇಳಿದರು.

ನಗರದ ವೀರಶೈವ ವಿದ್ಯಾವರ್ಧಕ ಸಂಘದ ಅಲ್ಲಂ ಸುಮಂಗಳಮ್ಮ ಮಹಿಳಾ ಕಾಲೇಜಿನ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಐದು ದಶಕಗಳ ಹಿಂದೆ ಮಹಿಳೆಯರಿಗೆ ಶಿಕ್ಷಣ ನೀಡುವ ಉದ್ದೇಶದಿಂದ ಆರಂಭವಾದ ಸಂಸ್ಥೆ ಇಂದು ಸಾವಿರಾರು ವಿದ್ಯಾರ್ಥಿನಿಯರಿಗೆ ಶಿಕ್ಷಣದ ಅವಕಾಶ ಕಲ್ಪಿಸಿರುವುದು ಶ್ಲಾಘನೀಯ ಎಂದರು.

ಪ್ರಸ್ತುತ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿನಿಯರಿಗೆ ಶಿಕ್ಷಣದ ಜತೆಗೆ ಉದ್ಯೋಗಾವಕಾಶಗಳಿಗೆ ಪೂರಕವಾದ ಕೌಶಲ್ಯಾಧಾರಿತ ಶಿಕ್ಷಣವೂ ಅಗತ್ಯವಾಗಿದೆ.

2ನೇ ಪುಟಕ್ಕೆ...

## 59ನೇ ಮಹಾ ಗಣೇಶೋತ್ಸವದ ಅದ್ದೂರಿ ವಿಸರ್ಜನೆ : ರಾಮುಲು ಭಾಗಿ

ಮೊಳಕಾಲ್ಮುರು : ಪಟ್ಟಣದಲ್ಲಿ 59ನೇ ಮಹಾ ಗಣೇಶೋತ್ಸವದ ಅಂಗವಾಗಿ ವಿವಿಧ ಬಡಾವಣೆಗಳಲ್ಲಿ ಗಣೇಶ ವಿಸರ್ಜನಾ ಪ್ರತಿಷ್ಠಾಪಿಸಲಾಗಿದ್ದ ಮೂರ್ತಿಗಳ ಕಾರ್ಯಕ್ರಮವು ಭಾನುವಾರ ಸಡಗರ, ಸಂಭ್ರಮದಿಂದ ನಡೆಯಿತು.ವಿವಿಧಗಣೇಶಸಮಿತಿಗಳ ಪ್ರತಿಷ್ಠಾಪಿಸಲಾಗಿದ್ದ ವತಿಯಿಂದ ಗಣೇಶ ಮೂರ್ತಿಗಳನ್ನು ವಿಶೇಷ ವಾಗಿ ಅಲಂಕರಿಸಿದ ವಾಹನಗಳಲ್ಲಿ ಮೆರವಣಿಗೆಯಮೂಲಕವಿಸರ್ಜನಾ

2ನೇ ಪುಟಕ್ಕೆ...



ಒಂದನೇ ಪುಟದಿಂದ...

# ‘ವಂದೇ ಮಾತರಂ’ ಗದ್ದಲ



ಪರಿಷತ್ತಿನಲ್ಲಿಯೂ ಬಿಜೆಪಿ ಸದಸ್ಯರು ಉಳಿದ ಚರಣಗಳನ್ನು ಹಾಡಿದರು.

ಈ ವೇಳೆ ಬಿಜೆಪಿ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ, ಸಂಪೂರ್ಣ ಗೀತೆ ಪ್ರಸಾರ ಮಾಡದಿರುವುದನ್ನು ಪ್ರಶ್ನಿಸಿದರು.

ವಿಧಾನ ಪರಿಷತ್ತಿನಲ್ಲಿ ಸಂವಿಧಾನದ ಪೀಠಿಕೆ ಓದುವ ಸಂದರ್ಭದಲ್ಲಿಯೂ ಘೋಷಣೆಗಳು ಕೇಳಿಬಂದಿದ್ದು, ಕೆಲಕಾಲ ಗದ್ದಲದ ವಾತಾವರಣ ನಿರ್ಮಾಣವಾಯಿತು. ರಾಜ್ಯ ಸರ್ಕಾರವು ಸೆಪ್ಟೆಂಬರ್ 8ರಂದು ಹೊರಡಿಸಿದ್ದ ಆದೇಶದಂತೆ, ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿ ಅಥವಾ ರಾಜ್ಯಪಾಲರು ಭಾಗವಹಿಸುವ ಕಾರ್ಯಕ್ರಮಗಳನ್ನು ಹೊರತುಪಡಿಸಿ ರಾಜ್ಯ ಸರ್ಕಾರದ ಕಾರ್ಯಕ್ರಮಗಳಲ್ಲಿ ‘ವಂದೇ ಮಾತರಂ’ನ ಮೊದಲ ಎರಡು ಚರಣಗಳನ್ನು ಮಾತ್ರ ಹಾಡಲು ಸೂಚಿಸಿತ್ತು. ಇದೇ ನಿರ್ಧಾರ ಅಧಿವೇಶನದ ಮೊದಲ ದಿನದ ಚರ್ಚೆಗೆ ಕಾರಣವಾಯಿತು.

## ಹರೀಶ್ ವಿರುದ್ಧ ಹಾಯ್ದ ಸ್ವಪಕ್ಷೀಯರ ದಂಗೆ: ಮಾಡಾಳ್ ಕಿಡಿ

ಇಂಥ ನಡವಳಿಕೆ ಸರಿಯಲ್ಲ ಎಂದು ಕಿಡಿಕಾರಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಚನ್ನಗಿರಿ ಬಿಜೆಪಿ ಯುವ ನಾಯಕ ಮಾಡಾಳ್ ಮಲ್ಲಿಕಾರ್ಜುನ್ ಅವರು, ಹರಿಹರ ಶಾಸಕ ಬಿ. ಪಿ. ಹರೀಶ್ ಜಿಲ್ಲೆಯ ವಿಚಾರದಲ್ಲಿ ಸರಿಯಾಗಿ ನಡೆದುಕೊಳ್ಳುತ್ತಿಲ್ಲ. ಜಿಲ್ಲಾಧ್ಯಕ್ಷರ ಆಯ್ಕೆ ವಿಚಾರದಲ್ಲಿಯೂ ತಗಾದೆ ತೆಗೆದಿದ್ದಾರೆ. ರಾಜಶೇಖರ್ ನಾಗಪ್ಪ ಅವರು ಅಧ್ಯಕ್ಷರಾಗಿದ್ದಲೂ ವಿರೋಧ ವ್ಯಕ್ತಪಡಿಸಿದ್ದರು. ರಾಜ್ಯ ನಾಯಕರು ಎಲ್ಲವನ್ನೂ ಪರಿಗಣಿಸಿಯೇ ನೇಮಕ ಮಾಡಿರುತ್ತಾರೆ. ವ್ಯರ್ಥ ಪ್ರಯತ್ನ ಮಾಡಿದ ಮೇಲೆ ದಾವಣಗೆರೆ ಜಿಲ್ಲೆಯಲ್ಲಿ ನಾಯಕರಾಗಬೇಕೆಂದು ಮಾತನಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ನಾವು ಜನರು ಮತ್ತು ಪಕ್ಷದ ಪರವಾಗಿ ಹೋರಾಟ ಮಾಡಿಕೊಂಡು ಹೋಗುತ್ತಿದ್ದೇವೆ. ಪಕ್ಷ ಕಟ್ಟುವ ಕೆಲಸ ಮಾಡುತ್ತಿದ್ದೇವೆ. ಹರೀಶ್ ಅವರು ಮೂರು ವರ್ಷದಿಂದಲೂ ಪಕ್ಷ ಸಂಘಟನೆಗೆ ಯಾವುದೇ ರೀತಿಯಲ್ಲಿಯೂ ಸಹಕಾರ ನೀಡಿಲ್ಲ. ನಾವೆಲ್ಲ ತಾಲೂಕಿನಲ್ಲಿ 50ರಿಂದ 60 ಸಾವಿರ ಬಿಜೆಪಿ ಸದಸ್ಯತ್ವ ನೋಂದಣಿ ಮಾಡಿದ್ದರೆ, ಹರಿಹರದಲ್ಲಿ ಎಂಟು ಸಾವಿರವೂ ದಾಟಿಲ್ಲ ಎಂದು ಹೇಳಿದರು. ನಾವು ಭದ್ರಾ ಡ್ಯಾಂ ನೀರು ಹರಿಸುವಿಕೆ, ಮೆಕ್ಕೆಜೋಳ, ಭತ್ತ ಬೆಳೆಗಾರರೂ ಸೇರಿದಂತೆ ರೈತರ ಸಂಕಷ್ಟ ಪರಿಹಾರಕ್ಕೆ ಹೋರಾಟ ಮಾಡಿದ್ದೇವೆ. ಈ ಹೋರಾಟಕ್ಕೆ ಬಿಪಿ ಹರೀಶ್ ಬಂದಿಲ್ಲ. ನೂರು ಜನರು ಸರಿ ಎಂದಿದ್ದನ್ನು ನೂರಾ ಒಂದನೇ ವ್ಯಕ್ತಿ ಬೇಡ ಎನ್ನುತ್ತಾರಲ್ವಾ ಹಾಗೆ ಹರೀಶ್ ವರ್ತನೆಯಾಗಿದೆ ಎಂದು ಕಿಡಿಕಾರಿದರು.

## ರಾಜ್ಯ ಸರ್ಕಾರದ ಚಳಿ ಬಿಡಿಸುತ್ತೇವೆ: ಅಶೋಕ್

ನಮ್ಮ ಕೆಲಸವನ್ನು ಸಮರ್ಥವಾಗಿ ಮಾಡುತ್ತೇವೆ ಎಂದು ಹೇಳಿದರು . ಈ ಸರ್ಕಾರ ವಿಶೇಷ ಅಧಿವೇಶನವನ್ನು ಬೇಗ ಮುಗಿಸುವ ಸನ್ನಾಹದಲ್ಲಿದೆ. ರಾಜ್ಯದಲ್ಲಿನ ಬರಪರಿಸ್ಥಿತಿ ಬಗ್ಗೆ ಚರ್ಚೆಗೆ ಎರಡು ದಿನ ಹೆಚ್ಚುವರಿಯಾಗಿ ಮೀಸಲಿಡಿ ಎಂದು ಕೇಳಿದ್ದೇವೆ. ಸರ್ಕಾರ ಏನು ಮಾಡುವುದೋ ನೋಡಬೇಕು. ಬರ ಸಂಬಂಧ ಸರ್ಕಾರ ಈಗ ಎಚ್ಚೆತ್ತುಕೊಂಡಿದೆ. ನಾಲ್ಕು ತಿಂಗಳು ಮೊದಲೇ ಎಚ್ಚರವಾಗಬೇಕಿತ್ತು ಎಂದರು.

## ಇಂದು ಸಂಚಾರ ಬದಲಾವಣೆ

ಸೆ.22ರಂದು ಬೆಳಿಗ್ಗೆ 11ರಿಂದ ರಾತ್ರಿ 11ರವರೆಗೆ ನಗರದ ವಿವಿಧೆಡೆ ವಾಹನ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ. ಕರ್ನಾಟಕ ಪೊಲೀಸ್ ಕಾಯ್ದೆ 1963ರ ಕಲಂ 31ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಅವರು ಈ ಕುರಿತು ಆದೇಶ ಹೊರಡಿಸಿದ್ದಾರೆ. ಹರಿಹರದಿಂದ ಹಳೆ ಪಿ.ಬಿ. ರಸ್ತೆ ಮೂಲಕ ದಾವಣಗೆರೆಗೆ ಬರುವ ಸರಕು ಲಾರಿಗಳು ಹರಿಹರದಿಂದಲೇ ಶಿವಮೊಗ್ಗ ಬೈಪಾಸ್ ಹೊಸ ಎನ್‌ಎಚ್–48–ಆವರಗೆರೆ ಬಾಡಾ ಕ್ರಾಸ್–ಡಿಸಿಎಂ ಅಂಡರ್‌ಪಾಸ್–ಧನದ ಮಾರ್ಕೆಟ್ ಕ್ರಾಸ್ ಮಾರ್ಗವಾಗಿ ಎಪಿಎಂಸಿಗೆ ತೆರಳಬೇಕು. ಕೆಎಸ್‌ಆರ್‌ಟಿಸಿ ಬಸ್‌ಗಳು ಇದೇ ಮಾರ್ಗದಲ್ಲಿ ಬಾಡಾ ಕ್ರಾಸ್ ಹಾಗೂ ಆವರಗೆರೆ ಮೂಲಕ ನೂತನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ತೆರಳಿ, ಅಲ್ಲಿಂದ ಬೆಂಗಳೂರು ಹಾಗೂ ಬೆಳಗಾವಿ ಕಡೆಗೆ ನಿರ್ಗಮಿಸಬೇಕು. ಖಾಸಗಿ ಬಸ್‌ಗಳು ನೂತನ ಖಾಸಗಿ ಬಸ್ ನಿಲ್ದಾಣ ಹಾಗೂ ಎಂ.ಜಿ. ಸರ್ಕಲ್ ಮೂಲಕ ಪ್ರಯಾಣಿಕರನ್ನು ಹತ್ತಿಳಿಸಿಕೊಂಡು, ಹರಿಹರದ ಕಡೆಗೆ ತೆರಳದೆ ಇದೇ ಮಾರ್ಗದಲ್ಲಿ ವಾಪಸ್ ತೆರಳಬೇಕು. ಚಿತ್ರದುರ್ಗ ಕಡೆಯಿಂದ ಬರುವ ಸರಕು ಲಾರಿಗಳು ಡಿಸಿಎಂ ಅಂಡರ್‌ಪಾಸ್ ಬಳಿಯ ಧನದ ಮಾರ್ಕೆಟ್ ಕ್ರಾಸ್ ಮೂಲಕ ಎಪಿಎಂಸಿಗೆ ತೆರಳಬೇಕು. ಕೆಎಸ್‌ಆರ್‌ಟಿಸಿ ಬಸ್‌ಗಳು ಬಾಡಾ ಕ್ರಾಸ್ ಹಾಗೂ ಆವರಗೆರೆ ಮೂಲಕ ನೂತನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ತಲುಪಿ, ಅಲ್ಲಿಂದ ಬೆಂಗಳೂರು ಮತ್ತು ಬೆಳಗಾವಿ ಕಡೆಗೆ ತೆರಳಬೇಕು. ಖಾಸಗಿ ಬಸ್‌ಗಳು ನೂತನ ಖಾಸಗಿ ಬಸ್ ನಿಲ್ದಾಣ ಹಾಗೂ ಎಂ.ಜಿ. ಸರ್ಕಲ್ ಮೂಲಕ ಪ್ರಯಾಣಿಕರನ್ನು ಹತ್ತಿಳಿಸಿಕೊಂಡು, ಹರಿಹರದ ಕಡೆಗೆ ತೆರಳದೆ ನಿಗದಿತ ಮಾರ್ಗದಲ್ಲಿಯೇ ವಾಪಸ್ ತೆರಳಬೇಕು. ಜಿಎಂಐಟಿ ಕಾಲೇಜು ಬಳಿಯ ಹಳೆ ಪಿ.ಬಿ. ರಸ್ತೆಯ ಎರಡೂ ಬದಿಗಳಲ್ಲಿ ಸರಕು ಲಾರಿಗಳನ್ನು ನಿಲ್ಲಿಸುವಂತಿಲ್ಲ. ಲಾರಿ ಮಾಲೀಕರ ಸಂಘ ಹಾಗೂ ಆರ್‌ಟಿಒ ಅಧಿಕಾರಿಗಳು ಸಮನ್ವಯದಿಂದ ಲಾರಿಗಳಿಗೆ ಪರ್ಯಾಯ ಖಾಸಗಿ ಪಾರ್ಕಿಂಗ್ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

# ಇದ್ದಕ್ಕಿದ್ದಂತೆ ಹೊತ್ತಿಕೊಂಡ ಬೆಂಕಿ: ಧಗಧಗನೆ ಹೊತ್ತಿ ಉರಿದ ಶಾಲಾ ಬಸ್!

ದಾವಣಗೆರೆ: ಮಕ್ಕಳು ಇಲ್ಲದ ವೇಳೆ ಇದ್ದಕ್ಕಿದ್ದಂತೆ ಶಾಲಾ ಬಸ್‌ಗೆ ಬೆಂಕಿ ಹೊತ್ತಿಕೊಂಡು ಧಗಧಗನೆ ಹೊತ್ತಿ ಉರಿದಿರುವ ಘಟನೆ ಜಿಲ್ಲೆಯ ಹರಿಹರ ತಾಲೂಕಿನ ಕಮಲಾಪುರ ರಸ್ತೆಯ ಬಳಿ ಭಾನುವಾರ ತಡರಾತ್ರಿ ನಡೆದಿದೆ.

ಅದೃಷ್ಟವಶಾತ್ ಈ ಸಮಯದಲ್ಲಿ ಬಸ್‌ನಲ್ಲಿ ಯಾರೂ ಇಲ್ಲದ ಕಾರಣ ಭಾರೀ ಅನಾಹುತವೊಂದು ತಪ್ಪಿದೆ. ಹೊಸಹಳ್ಳಿ ಗ್ರಾಮದ ಶ್ರೀ ಜ್ಞಾನಕ್ಷಿ ಖಾಸಗಿ ಶಾಲೆಗೆ ಸೇರಿದ ಬಸ್ ಇದು ಎಂದು ತಿಳಿದುಬಂದಿದೆ. ಶನಿವಾರ ಶಾಲಾ ಮಕ್ಕಳನ್ನು ಕರೆತಂದು ಶಾಲೆ ಬಳಿಯೇ ಬಸ್ ಅನ್ನು ಚಾಲಕ ನಿಲ್ಲಿಸಿದ್ದರು. ಈ ವೇಳೆ, ಬ್ಯಾಟರಿ ಶಾರ್ಟ್ ಸರ್ಕ್ಯೂಟ್ ಆಗಿ ಈ ಘಟನೆ ನಡೆದಿದೆ ಎಂದು ಮಲೇಬೆನ್ನೂರು ಪೊಲೀಸರು ಮಾಹಿತಿ ನೀಡಿದ್ದಾರೆ.

ಯಾರೋ ಕಿಡಿಗೇಡಿಗಳು ಬೆಂಕಿ ಹಚ್ಚಿರುವ ಶಂಕೆಯನ್ನೂ ಪೊಲೀಸರು ವ್ಯಕ್ತಪಡಿಸಿದ್ದಾರೆ. ಘಟನೆ ಮಲೆಬೆನ್ನೂರು ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.



ಮಲೇಬೆನ್ನೂರು ಠಾಣೆಯ ಪಿಎಸ್‌ಐ ಹಾರೂನ್ ಅಖ್ತರ್ ಅವರು ಮಾತನಾಡಿ, "ಹೊಸಹಳ್ಳಿ ಬಳಿ ಶಾಲಾ ಬಸ್ ಸುಟ್ಟು ಕರಕಲಾಗಿದೆ. ಬ್ಯಾಟರಿ ಶಾರ್ಟ್ ಸರ್ಕ್ಯೂಟ್‌ನಿಂದ ಈ ಅವಘಡ ಆಗಿರಬಹುದು. ಮಕ್ಕಳನ್ನು ಕರೆತಂದು ನಿಲ್ಲಿಸಿದಾಗ ಈ ಅವಘಡ ನಡೆದಿದೆ. ಸದ್ಯ ನಮ್ಮ ಗಮನಕ್ಕೆ ಬಂದಿದೆ. ಆದರೆ ಅವರು ಯಾರೂ ಠಾಣೆಗೆ ಬಂದು ದೂರು ಕೊಟ್ಟಿಲ್ಲ" ಎಂದು ತಿಳಿಸಿದರು.

# ಗಣೇಶನ ಬಳಿಕ ಮನೆ ಮನೆಗೆ ಸುತ್ತುವ ಜೋಕುಮಾರಸ್ವಾಮಿ: ಉತ್ತರ ಕರ್ನಾಟಕ ಭಾಗದಲ್ಲಿ ಜಾನಪದ ಆಚರಣೆ

ಉತ್ತರ ಕರ್ನಾಟಕದಲ್ಲಿ ಗಣೇಶ ಚತುರ್ಥಿಯ ನಂತರ ಕಾಣಿಸಿಕೊಳ್ಳುವ ಸಾಂಪ್ರದಾಯಿಕ ಆಚರಣೆ ಜೋಕುಮಾರಸ್ವಾಮಿಯ ಪರ್ಯಟನೆ.

ಗಣೇಶನ ಚತುರ್ಥಿಯ ಐದನೇ ದಿನ ತುಂಬಿದ ಅಷ್ಟಮಿಯಂದು ಮೂಲಾ ನಕ್ಷತ್ರದಲ್ಲಿ ಜೋಕುಮಾರನ ಜನನವಾಗುತ್ತೆ. ಬ್ರಾಹ್ಮಣರ ಮನೆಯಲ್ಲಿ ಜನಿಸುವ ಜೋಕುಮಾರನಿಗೆ ಜೀವವಿಲ್ಲ ಎಂದು ಬ್ರಾಹ್ಮಣರು ಮನೆಯವರು ಹೊರಗೆ ಹಾಕುತ್ತಾರಂತೆ. ಇದನ್ನು ಪಡೆದ ಅಂಬಿಗ ಸಮುದಾಯದವರು ಗೌಡರ ಮನೆಯ ಅರಳಿ ಹೊಲದಲ್ಲಿನ ಮಣ್ಣು ತಂದು ಬಡಿಗೇರ ಮನೆಯಲ್ಲಿ ಜೋಕುಮಾರಸ್ವಾಮಿ ಮೂರ್ತಿ ಮಾಡಿಸುತ್ತಾರೆ. ನಂತರ ಏಳು ದಿನಗಳ ಕಾಲ ಆ ಮೂರ್ತಿಯನ್ನು ಬಾರ್ಕೇರ ಮನೆತನದವರು ಏಳು ಊರುಗಳಿಗೆ ತೆಗೆದು–ಕೊಂಡು ಹೋಗುತ್ತಾರೆ.

ರೈತರ ಮನೆಗೆ ಭೇಟಿ ನೀಡುವ ಜೋಕುಮಾರ್: ಪ್ರಮುಖವಾಗಿ ರೈತರ ಮನೆಗೆ ಜೋಕುಮಾರಸ್ವಾಮಿಯನ್ನು ಹೊತ್ತುಕೊಂಡು ಹೋಗಲಾಗುತ್ತದೆ. ಈ ರೀತಿ ಜೋಕುಮಾರನನ್ನು ಹೊತ್ತು ಮಹಿಳೆಯರು ಮನೆ ಮನೆಗೆ ಭೇಟಿ ನೀಡುತ್ತಾರೆ. ಮನೆಯ ಮುಂದೆ ಬಾಗಿಲಲ್ಲಿ ಜೋಕುಮಾರಸ್ವಾಮಿ ಮೂರ್ತಿ ಇಟ್ಟು ಅವನ ಕುರಿತಾದ ಜಾನಪದ ಹಾಡು ಹೇಳುತ್ತಾರೆ.

ಜೋಕುಮಾರಸ್ವಾಮಿಗೆ ಜೋಳ, ಅಕ್ಕಿ, ರೊಟ್ಟಿ, ಮೆಣಸಿನಕಾಯಿ, ಹುಣಸೆಹಣ್ಣು ತರಕಾರಿ ಸೇರಿದಂತೆ ವಿವಿಧ ಧಾನ್ಯಗಳನ್ನು ನೀಡುತ್ತಾರೆ. ಈ ರೀತಿ ಧಾನ್ಯ ನೀಡಿದ ಮಹಿಳೆಯರಿಗೆ ಜೋಕುಮಾರಸ್ವಾಮಿಯನ್ನು ಹೊತ್ತ ಮಹಿಳೆಯರು ಕಾಡಿಗೆ ಮತ್ತು ಅಂಬಲಿ ನೀಡುತ್ತಾರೆ. ಕಾಡಿಗೆಯನ್ನು ಮನೆಯ ಬಾಗಿಲಗೆ ಹಚ್ಚುವುದು ಸಂಪ್ರದಾಯ. ಅಂಬಲಿಯನ್ನು ರೈತರು ಜಮೀನುಗಳಿಗೆ ಒಯ್ದು ಚರಗ ಚೆಲ್ಲುತ್ತಾರೆ. ಈ ರೀತಿ ಜೋಕುಮಾರಸ್ವಾಮಿ ಅಂಬಲಿಯನ್ನು



ಜಮೀನಿಗೆ ಚರಗ ಚೆಲ್ಲುವುದರಿಂದ ಬೆಳೆಗಳು ಹುಲುಸಾಗಿ ಬರುತ್ತವೆ ಎಂಬ ನಂಬಿಕೆ ಮನೆ ರೈತರಲ್ಲಿದೆ.

ಕಂಕಣ ಸಂತಾನ ಕಲ್ಪಿಸುವ ಜೋಕುಮಾರಸ್ವಾಮಿ: ಜೋಕುಮಾರಸ್ವಾಮಿಗೆ ಕಾಲುಗಳಿಲ್ಲದ ಕಾರಣ ಮಹಿಳೆಯರು ಬುಟ್ಟಿಯಲ್ಲಿ ಆತನನ್ನು ಹೊತ್ತುಕೊಂಡು ತಿರುಗುತ್ತಾರೆ. ಮದುವೆಯಾಗದವರಿಗೆ ಮದುವೆ, ಮಕ್ಕಳಾಗದವರಿಗೆ ಸಂತಾನಭಾಗ್ಯವನ್ನು ಜೋಕುಮಾರಸ್ವಾಮಿ ಕರುಣಿಸುತ್ತಾನೆ ಎಂಬ ನಂಬಿಕೆ ಇದ್ದು, ಹರಕ್ಕೆ ಹೊತ್ತು, ಪ್ರಾರ್ಥಿಸುತ್ತಾರೆ. ಈ ರೀತಿ ಬೇಡಿಕೊಂಡವರು ಸಂತಾನ ಸಾಫಲ್ಯ ಕಂಡವರು ಜೋಕುಮಾರಸ್ವಾಮಿಗೆ ತೊಟ್ಟಿಲು, ಲಿಂಗದಕಾಯಿ ಮತ್ತು ಉಡದಾರ ನೀಡುತ್ತಾರೆ.

ಜೋಕುಮಾರಸ್ವಾಮಿ ಬಾಯಿಗೆ ಬೆಣ್ಣೆ ಸವರಲಾಗುತ್ತದೆ. ಈ ರೀತಿ ಬೆಣ್ಣೆ ಹಚ್ಚಿದ್ರೆ ಮನೆಯಲ್ಲಿ ಹಸುಗಳು ಹಾಲು ಹೆಚ್ಚು ನೀಡುತ್ತವೆ ಎಂಬ ನಂಬಿಕೆ ಜನರಲ್ಲಿದೆ.

ಅನಂತ ಚತುರ್ದಶಿಯಂದು ಅಂತ್ಯ: ಅನಂತಚತುರ್ದಶಿ ದಿನ ಜೋಕುಮಾರ ಸಾವನ್ನಪ್ಪುತ್ತಾನೆ. ಇನ್ನು ಜೋಕುಮಾರಸ್ವಾಮಿ ಗಣೇಶ ಸಹೋದರ ಎನ್ನಲಾಗುತ್ತದೆ. ಗಣೇಶನಿಗೆ ಭೂಲೋಕದಲ್ಲಿ ಭಕ್ತರು ಸಮೃದ್ಧಿಯಿಂದ ನೋಡಿಕೊಳ್ಳುತ್ತಾರೆ. ಆದರೆ ಜೋಕುಮಾರನಿಗೆ ನೈಜತೆಯಿಂದ ನಡೆದುಕೊಳ್ಳುತ್ತಾರೆ. ಗಣೇಶನು ಪಾರ್ವತಿ – ಪರಮೇಶ್ವರನ ಬಳಿ ತೆರಳಿ ಭೂಲೋಕದಲ್ಲಿ ಎಲ್ಲ ಸಮೃದ್ಧಿಯಾಗಿದೆ ಎಂದು ತಿಳಿಸುತ್ತಾನೆ. ಆದರೆ ಜೋಕುಮಾರ ಭೂಲೋಕದ ನೈಜತೆಯನ್ನು ಪಾರ್ವತಿ ಪರಮೇಶ್ವರನಿಗೆ ಹೇಳುತ್ತಾನೆ ಎಂಬ ಐತಿಹ್ಯ ಇದೆ.

ಅಣಜಿಗರು, ಕುಂಬಾರರು, ಬಾರ್ಕೇರರು, ಬ್ರಾಹ್ಮಣರು ಮತ್ತು ಅಗಸರು ಹೀಗೆ ವಿವಿಧ ಸಮುದಾಯಗಳ ಮನೆಗಳಿಗೆ ಸಂಚರಿಸುವ ಜೋಕುಮಾರಸ್ವಾಮಿ ಸೌಹಾರ್ದತೆ ಮೆರೆಯುತ್ತಾನೆ. ತುಂಬಿದ ಅಷ್ಟಮಿಯ ನಂತರದ ದಿನಗಳಲ್ಲಿ ಉತ್ತರ ಕರ್ನಾಟಕದಲ್ಲಿ ಜೋಕುಮಾರಸ್ವಾಮಿಯನ್ನು ಹೊತ್ತ ಮಹಿಳೆಯರು ಕಾಣಿಸಿಕೊಳ್ಳುತ್ತಾರೆ.

ಈ ಕುರಿತಂತೆ ಮಾತನಾಡಿದ ಬಾರ್ಕೇರ ಮನೆತನದ ಮಹಿಳೆ ಶೈಲಾ, ತುಂಬಿದ ಅಷ್ಟಮಿ ದಿನ ರಾತ್ರಿ ಮಣ್ಣಿನಿಂದ ಜೋಕುಮಾರನನ್ನು ಮಾಡುತ್ತೇವೆ. ಬೆಳಗ್ಗೆ 6 ಗಂಟೆಗೆ ಜೋಕುಮಾರ ಸಿದ್ಧನಾಗಿರುತ್ತಾನೆ. ಜೋಕುಮಾರನ ಮೂರ್ತಿಗೆ ಮನೆಯಲ್ಲಿ ಪೂಜೆ ಮಾಡಿ ತಾಯಿ ಲಕ್ಷ್ಮಿ ಮನೆಗೆ ಕ–ರೆದುಕೊಂಡು ಹೋಗುತ್ತೇವೆ. ಲಕ್ಷ್ಮಿ ಇರುವ ಮನೆಯವರು ಮನೆಗೆ ಮಗ ಬಂದನೆಂದು ಸಂಭ್ರಮಿಸುತ್ತಾರೆ. ವಿವಿಧ ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸುತ್ತಾರೆ. ಅಲ್ಲಿಂದ 7 ದಿನಗಳ ಕಾಲ 7 ಗ್ರಾಮಗಳನ್ನು ಅಲೆಯುತ್ತೇವೆ. ಭಕ್ತರು ನೀಡುವ ಜೋಳ, ಅಕ್ಕಿ, ರೊಟ್ಟಿ, ಪಡೆಯುತ್ತೇವೆ. 7 ನೇಯ ದಿನ ನಮ್ಮ ಮನೆಯಲ್ಲಿ ಗೋದಿ ಹುಗ್ಗಿ ಸೇರಿದಂತೆ ನಮ್ಮ ಕೈಲಾದ ಆಹಾರ ಪದಾರ್ಥಗಳನ್ನು ತಯಾರಿಸಿ ನೈವೇದ್ಯ ಹಿಡಿದು ಬುತ್ತಿ ಕಟ್ಟುತ್ತೇವೆ ಎಂದರು.

ನಂತರ ಜೋಕುಮಾರನ ಮೂರ್ತಿಯನ್ನು ಹೊಂಡದಲ್ಲಿ ಇಟ್ಟು ಬರುತ್ತೇವೆ. ನಂತರ ಅಗಸರು ಜೋಕುಮಾರನ ತಲೆ ಒಡೆಯುತ್ತಾ–ರೆ. ಜೋಕುಮಾರನನ್ನು ಹೊತ್ತುಕೊಂಡು ಮನೆಗೆ ಹೋದಾಗ ಭಕ್ತರಿಗೆ ಅಂಬಲಿ, ಕಾಡಿಗೆ ಕೊಡುತ್ತೇವೆ. ಕಾಡಿಗೆಯನ್ನು ಭಕ್ತರು ಹಣೆಗೆ ಹಚ್ಚಿಕೊಳ್ಳುತ್ತಾರೆ. ಅಂಬಲಿಯನ್ನು ಹೊಲದಲ್ಲಿ ಹೂಳುತ್ತಾರೆ. ಕಾಡಿಗೆಯನ್ನು ಜೋಳದ ಹೊಲದಲ್ಲಿ ಹಾಕುವುದರಿಂದ ಜೋಳ ಕಪ್ಪಾಗುವುದಿಲ್ಲ ಎಂಬ ನಂಬಿಕೆ ಇದೆ. ಜೋಕುಮಾರನ ಹತ್ತಿರ ಬೇಡಿ–ಕೊಂಡರೆ ಮದುವೆ ಆಗದವರಿಗೆ ಮದುವೆ ಆಗುತ್ತದೆ. ಮಕ್ಕಳಾಗದವರಿಗೆ ಮಕ್ಕಳಾಗುತ್ತವೆ. ಮಕ್ಕಳಿಲ್ಲದವರಿಗೆ ಜೋಕುಮಾರನ ಬಾಯಿಯಲ್ಲಿ ಇರುವ ಬೆಣ್ಣೆಯನ್ನು ಕೊಡುತ್ತೇವೆ. ಮದುವೆ ಆಗದವರಿಗೆ ಕಂಕಣ ಕಟ್ಟುತ್ತೇವೆ. ಈ ರೀತಿ ಆಚರಿಸಿದರೆ ಮಕ್ಕಳಾಗಿರುವ, ಮದುವೆ ಆಗಿರುವ ಉದಾಹರಣೆಗಳು ಸಾಕಷ್ಟಿವೆ ಎಂದು ಶೈಲಾ ತಿಳಿಸಿದರು.

ಇದೇ ವೇಳೆ ಮಾತನಾಡಿದ ಮಹಿಳೆ ಲಲಿತಾ ಜೋಕುಮಾರ ಮತ್ತು ಗಣಪ್ಪ ಅಣ್ಣಾ–ತಮ್ಮ ಗಣೇಶ ಜನಿಸಿ 5 ದಿನಕ್ಕೆ ಜೋಕುಮಾರ ಜನಿಸುತ್ತಾನೆ ಎಂದು ತಿಳಿಸಿದರು. ಜೋಕುಮಾರ ಬ್ರಾಹ್ಮಣರ ಮಗಾ, ಆತನಿಗೆ ಕಾಲಿಲ್ಲದ ಕಾರಣ ಹೊರಗೆ ಇಟ್ಟಿರುತ್ತಾರೆ. ಅವನನ್ನು ನಾವು ಬುಟ್ಟಿಯಲ್ಲಿ ಇಟ್ಟುಕೊಂಡು ಊರಲ್ಲಿ ತಿರುಗಾಡುತ್ತೇವೆ. 7 ದಿನದ ನಂತರ ಜೋಕುಮಾರ ಪರಮೇಶ್ವರನ ಹತ್ತಿರ ಹೋಗಿ ಭೂಮಿಯಲ್ಲಿ ಮಳೆ ಇಲ್ಲಾ, ಬೆಳೆ ಇಲ್ಲಾ ರೈತರು ಸಂಕಷ್ಟದಲ್ಲಿ ಇದ್ದಾರೆ ಎಂದು ತಿಳಿಸುತ್ತಾನೆ. ನಂತರ ಮಳೆ ಆಗುತ್ತದೆ ಎಂಬ ನಂಬಿಕೆ ಇದೆ ಎಂದು ಲಲಿತಾ ತಿಳಿಸಿದರು.

# ರಾಮ ಮಂದಿರದಲ್ಲಿ 105 ಬಾರಿ ಕಾಣಿಕೆ ಕಳವು,

## ಸೆ.25ರ ಒಳಗಡೆ ಚಾರ್ಜ್‌ಶೀಟ್ ಸಲ್ಲಿಕೆ: ಸುಪ್ರೀಂಗೆ ಎಸ್‌ಐಟಿ

ತನಿಖೆಯ ವೇಳೆ ಸಂಗ್ರಹಿಸಲಾದ ಸಿಸಿಟಿವಿ ದೃಶ್ಯಾವಳಿಗಳು, ಸಾಕ್ಷಿಗಳ ಹೇಳಿಕೆಗಳು ಹಾಗೂ ಇದುವರೆಗೆ ಬಂಧಿಸಲಾದ ಆರೋಪಿಗಳ ವಿವರಗಳನ್ನು ನ್ಯಾಯಾಲಯದ ಗಮನಕ್ಕೆ ತರಲಾಯಿತು.

ಸಿಸಿಟಿವಿ ದೃಶ್ಯಾವಳಿಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ ಆರೋಪಿಗಳನ್ನು ಗುರುತಿಸಲಾಗಿದ್ದು, ಈ ಎಲ್ಲಾ ಮಾಹಿತಿಯನ್ನು ನ್ಯಾಯಾಲಯ ದಾಖಲಿಸಿಕೊಂಡಿದೆ. ದೇವಸ್ಥಾನದಲ್ಲಿ ಭಕ್ತರು ನೀಡುವ ಬೆಲೆಬಾಳುವ ವಸ್ತುಗಳಿಗೆ ಸಾಫ್ಟ್‌ವೇರ್ ಮೂಲಕ ರಸೀದಿ ನೀಡಲಾಗುತ್ತಿದ್ದು, ಆ ವಸ್ತುಗಳನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಲಾಕರ್‌ನಲ್ಲಿ ಸುರಕ್ಷಿತವಾಗಿಡಲಾಗುತ್ತದೆ. ಎಂದು ವರದಿಯಲ್ಲಿ ಸ್ಪಷ್ಟಪಡಿಸಲಾಗಿದೆ.

# ಮಹಿಳೆಯರ ಉನ್ನತ ಶಿಕ್ಷಣ, ಸಬಲೀಕರಣಕ್ಕೆ ಸಂಸ್ಥೆಯ ಮಹತ್ವದ ಸೇವೆ

ವಿದ್ಯಾರ್ಥಿನಿಯರಲ್ಲಿರುವ ಪ್ರತಿಭೆ ಮತ್ತು ಸಾಮರ್ಥ್ಯವನ್ನು ಬೆಳೆಸುವತ್ತ ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಮಹಿಳಾ ಶಿಕ್ಷಣದ ಮೂಲಕ ಸಮಾಜದಲ್ಲಿ ಸಮಾನತೆಯ ಸಂದೇಶವನ್ನು ಸಾರುವ ಕಾರ್ಯವನ್ನು ಸಂಸ್ಥೆ ನಿರಂತರವಾಗಿ ಮಾಡಿಕೊಂಡು ಬಂದಿದೆ. ಬದಲಾಗುತ್ತಿರುವ ಕಾಲಘಟ್ಟಕ್ಕೆ ಅನುಗುಣವಾಗಿ ವಿದ್ಯಾರ್ಥಿನಿಯರಿಗೆ ಅನುಕೂಲವಾಗುವಂತೆ ವಿವಿಧ ಕೌಶಲ್ಯಾಭಿವೃದ್ಧಿ ಹಾಗೂ ವೃತ್ತಿಪರ ಕೋರ್ಸ್‌ಗಳನ್ನು ಆರಂಭಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಮಹಿಳಾ ಸಬಲೀಕರಣದ ಕುರಿತು ಸಮಾಜದಲ್ಲಿ ವ್ಯಾಪಕ ಚರ್ಚೆ ನಡೆಯುತ್ತಿದೆ. ಮಹಿಳೆಯರು ಶಿಕ್ಷಣ ಪಡೆದು ಸ್ವಾವಲಂಬಿಗಳಾಗುವುದರ ಮೂಲಕ ಕುಟುಂಬ ಹಾಗೂ ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಬೇಕು.

ಶಿಕ್ಷಣದೊಂದಿಗೆ ಜವಾಬ್ದಾರಿ, ಮಾನವೀಯ ಮೌಲ್ಯಗಳು ಮತ್ತು ಸಾಮಾಜಿಕ ಕಾಳಜಿಯನ್ನು ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಲಾಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಣೇಕಲ್ ಮಹಾಂತೇಶ್, ಕಾರ್ಯದರ್ಶಿ ಡಾ. ಅರವಿಂದ, ಸಹ ಕಾರ್ಯದರ್ಶಿ ಟಿ. ಪಂಪನಗೌಡ, ಕಾಲೇಜು ಆಡಳಿತ ಮಂಡಳಿ ಸದಸ್ಯರು, ಪ್ರಾಂಶುಪಾಲರು, ಪ್ರಾಧ್ಯಾಪಕರು, ಸಿಬ್ಬಂದಿ ಹಾಗೂ ವಿವಿಧ ಗಣ್ಯರು ಉಪಸ್ಥಿತರಿದ್ದರು. ಕಾಲೇಜಿನ ವಿದ್ಯಾರ್ಥಿನಿಯರು ಹಾಗೂ ಸಿಬ್ಬಂದಿ ಕಾರ್ಯಕ್ರಮದ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದರು.

# 11ನೇ ಆಯುರ್ವೇದ ದಿನಾಚರಣೆ

ವಿಜಯನಗರ : ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ ವತಿಯಿಂದ ಇದೇ ಸೆಪ್ಟೆಂಬರ್ 23 ರಂದು ಬೆಳಗ್ಗೆ 9.30ಕ್ಕೆ ನಗರದ ಬಸವಣ್ಣ ಕಾಲುವೆ ಹತ್ತಿರ, ಬ್ರಹ್ಮಕುಮಾರಿಸ್ ಸಭಾಂಗಣದಲ್ಲಿ 11ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಸ್.ಬಸವಂತಪ್ಪ ಉದ್ಘಾಟಿಸುವರು.

# ಗಣೇಶೋತ್ಸವದ ಅದ್ದೂರಿ ವಿಸರ್ಜನೆ

ಸ್ಥಳಕ್ಕೆ ಕೊಂಡೊಯ್ಯಲಾಯಿತು. ದ್ರಾಕ್ಷಿ ಮತ್ತು ವೈನ್ ಮಂಡಳಿ ರಾಜ್ಯ ಅಧ್ಯಕ್ಷರು ವಿಸರ್ಜನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ–ದರು. ಮೆರವಣಿಗೆಯಲ್ಲಿ ಡಿಜೆ ಸಂಗೀತ, ಡೊಳ್ಳು ಕುಣಿತ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನ ಸೆಳೆದವು. ಯುವಕರು, ಮಹಿಳೆಯರು ಹಾಗೂ ಭಕ್ತರು ಗಣೇಶನ ನಾಮಸ್ಮರಣೆ, ಜಯಘೋಷಗಳನ್ನು ಮೊಳಗಿಸುತ್ತಾ ಸಂಭ್ರಮಿಸಿದರು. ಸಂಗೀತದ ತಾಳಕ್ಕೆ ಹೆಜ್ಜೆ ಹಾಕಿ ಕುಣಿದು ಕುಪ್ಪಳಿಸಿದೆ ವಿಶೇಷವಾಗಿ ಗಣೇಶ ಸಮಿತಿಯ ಸದಸ್ಯರು ಒಂದೇ ರೀತಿಯ ಕೆಂಪು ಟವೆಲ್ ಧರಿಸಿ ಡೊಳ್ಳು ಹಾಗೂ ಡಿಜೆ ಸಂಗೀತಕ್ಕೆ ನೃತ್ಯ ಮಾಡಿದ್ದು ಸಾರ್ವಜನಿಕರ ಗಮನ ಸೆಳೆಯಿತು. ಮೆರವಣಿಗೆಯುದ್ದಕ್ಕೂ ‘ಗಣಪತಿ ಬಪ್ಪಾ ಮೋರಿಯಾ’ ಸೇ–ರಿದಂತೆ ವಿವಿಧ ಘೋಷಣೆಗಳು ಮೊಳಗಿದವು. ಮಾಜಿ ಸಚಿವ ಹಾಗೂ ಸಂಸದ ಬಿ. ಶ್ರೀರಾಮುಲು ಅವರು ಡಿಜೆ ವಾಹನದ ಚಾಲಕರಾಗಿ ಮೆರವಣಿಗೆಯಲ್ಲಿ ಭಾಗವಹಿಸಿದ್ದು ವಿಶೇಷ ಗಮನ ಸೆಳೆಯಿತು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿಸರ್ಜನಾ ಕಾರ್ಯಕ್ರಮದಲ್ಲಿ ಪಿ.ಎಂ. ಮಂಜುನಾಥ್, ಮೊಳಕಾಲ್ಮುರು ಮಂಡಲ ಅಧ್ಯಕ್ಷ 8–ಶ್ರೀರಾಮರೆಡ್ಡಿ, ಪಾಪೇಶ್, ಹರೀಶ್ ಕಡೆತೋಟ, ಸಿದ್ದಯ್ಯ ಕೋಟೆ, ಮ–ರಿಸ್ವಾಮಿ, ಸಿದ್ದಣ್ಣ, ಡಿಶ್ ರಾಜಣ್ಣ, ನುಂಕೇಶ್, ನೇರಳಹಳ್ಳಿ ಪ್ರಭಾಕರ್, ಮೊಗಳಹಳ್ಳಿ ಸಿದ್ದಾರ್ಥ, ರೀಶ್ ಪಾಳೆಗಾರ್, ಮರ್ಲಹಳ್ಳಿ ರವಿಕುಮಾರ್, ನುಂಕೇಶ್ ಗೌಡ, ಚಂದ್ರಶೇಖರ ಗೌಡ. ಮಾಜಿ ಉಪಾಧ್ಯಕ್ಷ ಮಂಜಣ್ಣ ಸೇರಿದಂತೆ ಸದಸ್ಯರು ಹಾಗೂ ನೂರಾರು ಭಕ್ತರು ಭಾಗವಹಿಸಿದ್ದರು.

# ಹಂಪಿ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯ ಸೇರಿದ ನಾಣ್ಯ ಗಣಪತಿ



ಹೊಸಪೇಟೆ : ಈ ಬಾರಿಯ ಗಣೇಶೋತ್ಸವದಲ್ಲಿ ಮಡ್ಡೇರ ಓಣಿಯಲ್ಲಿ ಸ್ಥಾಪಿಸಿ ಐದು ದಿನ ಪೂಜಿಸಲಾಗಿದ್ದ ಭೀಷ್ಮ ಯುವಕರ ಸಂಘದವರ ನಾಣ್ಯ ಗಣಪತಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯ ಸೇರಿದೆ. ಸುಮಾರು ಎರಡು ಕ್ವಿಂಟಲ್ ತೂಕದ, 12,101 ನಾಣ್ಯಗಳನ್ನು ಮೈಮೇಲೆ ಸುಂದರವಾಗಿ ಅಂಟಿಸಿಕೊಂಡಿರುವ ಗಣೇಶ ಮೂರ್ತಿಯನ್ನು ಸಂಘದ ಅಧ್ಯಕ್ಷ ನವೀನ್ ಕುಮಾರ್ ಅವರ ನೇತೃತ್ವದ ತಂಡ ಶನಿವಾರ ಹಂಪಿ ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ಸಮರ್ಪಿಸಿತು. ಕುಲಪತಿ ಪ್ರೊ.ಡಿ.ವಿ.ಪರಮಶಿವಮೂರ್ತಿ ಅವರು ಸ್ವೀಕರಿಸಿ, ಮುಂದಿನ ದಿನಗಳಲ್ಲಿ ಅದು ವೀಕ್ಷಣೆಗೆ ಲಭ್ಯವಾಗುವುದನ್ನು ಖಚಿತಪಡಿಸಿದರು.

'1, 5, 10, 20 ರೂಪಾಯಿ ನಾಣ್ಯದ ಒಟ್ಟು ಮೌಲ್ಯ 18,000 ಇದೆ. ದುಡ್ಡು ಬಂದಾಗ ಜ್ಞಾನ ಸಂಪಾದನೆಯನ್ನು ಕಡೆಗಣಿಸಬಾರದು ಎಂಬ ಒಂದು ಸಂದೇಶವೂ ಇದರಲ್ಲಿದೆ. ಆಗಸ್ಟ್ 15ರಂದು ನಾವು ಗಣೇಶ ವಿಗ್ರಹ ತಂದು ನಾಣ್ಯ ಅಂಟಿಸುವ ಕೆಲಸ ಆರಂಭಿಸಿದ್ದೆವು. ಸೆ.14ರಂದು ಅದು ಕೊನೆಗೊಂಡು ಅಂ-ದೇ ಅದರ ಪ್ರತಿಷ್ಠಾಪನೆ ಆಯಿತು. ಐದು ದಿನ ಪೂಜಿಸಿದ ಬಳಿಕ, ಶುಕ್ರವಾರ ಚಿಕ್ಕ ಗಣೇಶ ವಿಗ್ರಹವನ್ನು ಪೂಜಿಸಿ ಕಾಲುವೆಯಲ್ಲಿ ವಿಸರ್ಜಿಸಿದ್ದೇವೆ. ಈ 7.5 ಅಡಿ ಎತ್ತರದ ಮೂರ್ತಿಯನ್ನು ಮೆರವಣಿಗೆ ಮಾಡಿ ವಾಪಸ್ ತಂದು ಶನಿವಾರ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ್ದೇವೆ' ಎಂದು ನವೀನ್ ಕುಮಾರ್ ಹೇಳಿದರು. ಈ ಸಂಘ ಕಳೆದ 14 ವರ್ಷಗಳಿಂದ ಸಾರ್ವಜನಿಕ ಗಣೇಶೋತ್ಸವ ಆಚರಿಸುತ್ತಿದ್ದು, ಮೂರು ವರ್ಷಗಳಿಂದ ಒಂದೊಂದು ವಿಶಿಷ್ಟ ಪರಿಕಲ್ಪನೆಯಲ್ಲಿ ಮೂರ್ತಿ ಪ್ರತಿಷ್ಠಾಪಿಸುತ್ತಿದೆ. 2024ರಲ್ಲಿ ಸರ್ಕಾರಿ ಶಾಲೆ ಉಳಿಸುವ ಸಂದೇಶ ಹೊತ್ತ ಗಣೇಶ ಇದ್ದರೆ, ಕಳೆದ ವರ್ಷ ಗೋಹತ್ಯೆ ನಿಷೇಧಿಸಲು ಆಗ್ರಹಿಸುವ ಸಂದೇಶ ಇತ್ತು.

# ಬಳ್ಳಾರಿಯಲ್ಲಿ ಹಿಂದೂ ಮಹಾಗಣಪತಿ ಶೋಭಾಯಾತ್ರೆ ಸಂಭ್ರಮ




ಬಳ್ಳಾರಿ: ನಗರದ ಸೆಂಟನರಿ ಹಾಲ್‌ನಲ್ಲಿ ಪ್ರತಿಷ್ಠಾಪಿಸಲಾಗಿದ್ದ ಹಿಂದೂ ಮಹಾ ಗಣಪತಿ ಉತ್ಸವದ ಅಂಗವಾಗಿ ಭಾನುವಾರ ಸಂಜೆ ನಗರದ ಪ್ರಮುಖ ಬೀದಿಗಳಲ್ಲಿ ಬೃಹತ್ ಶೋಭಾಯಾತ್ರೆ ಅದ್ದೂರಿಯಾಗಿ ನಡೆಯಿತು. ಅಂತರರಾಷ್ಟ್ರೀಯ ಹಿಂದೂ ಪರಿಷತ್ ಹಾಗೂ ರಾಷ್ಟ್ರೀಯ ಭಜರಂಗದಳದ ವತಿಯಿಂದ ಆಯೋಜಿಸಿದ್ದ ಶೋಭಾಯಾತ್ರೆಯಲ್ಲಿ ಗಣೇಶ ಭಕ್ತರು, ಸಾರ್ವಜನಿಕರು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ವಿವಿಧ ಅಲಂಕಾರಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಭಕ್ತಿಗೀತೆಗಳೊಂದಿಗೆ ಗಣೇಶನ ಭವ್ಯ ಮೆರವಣಿಗೆ ಗಮನ ಸೆಳೆಯಿತು.

ಸೆಂಟನರಿ ಹಾಲ್‌ನಿಂದ ಆರಂಭಗೊಂಡ ಶೋಭಾಯಾತ್ರೆಯು ರಾಯಲ್ ಸರ್ಕಲ್, ಬೆಂಗಳೂರು ರಸ್ತೆ ಮಾರ್ಗವಾಗಿ ಬ್ರೂಸ್ ಪೇಟ್ ಪೊಲೀಸ್ ಠಾಣೆಯ ಮೂಲಕ ಮೋತಿ ಸರ್ಕಲ್ ತಲುಪಿತು. ಮಾರ್ಗದುದ್ದಕ್ಕೂ ಭಕ್ತರು ಗಣೇಶನ ದರ್ಶನ ಪಡೆದು, ಪೂಜೆ ಸಲ್ಲಿಸಿ ಸಂಭ್ರಮಿಸಿದರು.

ಶೋಭಾಯಾತ್ರೆಯ ಹಿನ್ನೆಲೆಯಲ್ಲಿ ಪ್ರಮುಖ ರಸ್ತೆಗಳಲ್ಲಿ ವಿಶೇಷ ಸಿದ್ಧತೆಗಳನ್ನು ಕೈಗೊಳ್ಳಲಾಗಿತ್ತು. ಮೆರವಣಿಗೆಯಲ್ಲಿ ಯುವಕರು ಹಾಗೂ ಭಕ್ತರು ಉತ್ಸಾಹದಿಂದ ಭಾಗವಹಿಸಿ, ಗಣೇಶನಿಗೆ ಜಯಘೋಷ ಮೊಳಗಿಸಿದರು. ವಿವಿಧ ಕಲಾತಂಡಗಳು ಹಾಗೂ ಸಾಂಸ್ಕೃತಿಕ ಪ್ರದರ್ಶನಗಳು ಶೋಭಾಯಾತ್ರೆಯ ಮೆರುಗನ್ನು ಹೆಚ್ಚಿಸಿದವು.

ನಗರದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು, ಶೋಭಾಯಾತ್ರೆ ಸಾಗಿದ ಮಾರ್ಗದುದ್ದಕ್ಕೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು.

# ತಹಶೀಲ್ದಾರ್ ಕಚೇರಿಗೆ ಶಾಸಕ ನಾರಾ ಭರತ್ ರೆಡ್ಡಿ ದಿಢೀರ್ ಭೇಟಿ



ಬಳ್ಳಾರಿ: ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಬಳ್ಳಾರಿ ತಾಲೂಕು ತಹಶೀಲ್ದಾರ್ ಕಚೇರಿಗೆ ದಿಢೀರ್ ಭೇಟಿ ನೀಡಿ ಅಧಿಕಾರಿಗಳ ಕಾರ್ಯವೈಖರಿ ಪರಿಶೀಲಿಸಿದರು.

ವಿವಿಧ ಪಿಂಚಣಿ ವಿಳಂಬ ಕುರಿತು ಬಂದ ದೂರುಗಳ ಹಿನ್ನೆಲೆಯಲ್ಲಿ ಭೇಟಿ ನೀಡಿದ ಅವರು, 'ಸರ್ಕಾರದ ಸೇವೆಗಳು ಜನರ ಮನೆಬಾಗಿಲಿಗೆ ತಲುಪಬೇಕು ಎಂಬುದು ಸಿಎಂ ಕನಸು. ಸಾರ್ವಜನಿಕರಿಗೆ ತೊಂದರೆ ನೀಡುವ ಅಧಿಕಾರಿಗಳ ವಿರುದ್ಧ ಅಮಾನತು ಸೇರಿ ಕಠಿಣ ಕ್ರಮ ಜರುಗಿಸಲಾಗುವುದು. ಇನ್ನುಂದೆ ಎರಡು ದಿನಕ್ಕೊಮ್ಮೆ ವಿವಿಧ ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡುವೆ' ಎಂದು ಎಚ್ಚರಿಸಿದರು.

'2028ರ ಚುನಾವಣೆಯಲ್ಲಿ ರಣರಂಗದ ಫಲಿತಾಂಶವೇ ಅವರಿಗೆ ಉತ್ತರಿಸಲಿದೆ' ಎಂದರು.

ಇದೇ ವೇಳೆ, ಶೀಘ್ರದಲ್ಲೇ ನಗರದಲ್ಲಿ ಬೃಹತ್ ಪ್ರಮಾಣದಲ್ಲಿ ವಾಲ್ಮೀಕಿ ಪುತ್ಥಳಿ ಉದ್ಘಾಟಿಸುವುದಾಗಿ ತಿಳಿಸಿದರು. ತಹಶೀಲ್ದಾರ್ ರೇಖಾ ಹಾಜರಿದ್ದರು.

ಬಳ್ಳಾರಿ: ದಲಿತ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ಇನ್ನಷ್ಟು ರಾಜಕೀಯ ಪ್ರಾತಿನಿಧ್ಯ ಸಿಗುವುದು ಅಗತ್ಯ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ಇಲ್ಲಿನ ಡಾ. ಬಿ.ಆರ್. ಅಂಬೇಡ್ಕರ್ ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಘದ ಚಟುವಟಿಕೆಗಳಿಗಾಗಿ ವೈಯಕ್ತಿಕವಾಗಿ 10 ಲಕ್ಷ ದೇಣಿಗೆ ನೀಡಿ ಅವರು ಮಾತನಾಡಿದರು. 'ಕೇವಲ ಕೆಲವರಿಗೆ ಅಧಿಕಾರ ಸಿಕ್ಕರೆ ಸಾಲದು. ಅಂಬೇಡ್ಕರ್ ವಿಚಾರಧಾ-ರೆ ಹೊಂದಿರುವ ಯುವಕರು ರಾಜಕೀಯವಾಗಿ ಮುಂಚೂಣಿಗೆ ಬರಬೇಕು. ಮಹಾನಗರ ಪಾಲಿಕೆ ಸೇರಿದಂತೆ ಎಲ್ಲ ಹಂತಗಳಲ್ಲೂ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ಸಿಗಬೇಕು' ಎಂದರು.

ಲಿಡ್ಕರ್ ಅಧ್ಯಕ್ಷ ಮುಂಡ್ರಿಗಿ ನಾಗರಾಜ, ದಲಿತ ಮುಖಂಡ ಎ. ಮಾನಯ್ಯ ಮಾತನಾಡಿದರು. ಶಾಸಕರನ್ನು ಸನ್ಮಾನಿಸಲಾಯಿತು. ಮುಖಂಡರಾದ ಎಲ್. ಮಾರೆಣ್ಣ, ಎರುಕುಲಸ್ವಾಮಿ, ಸಂಘದ ಅಧ್ಯಕ್ಷ ತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

# ಗೆಣಿಕೆಹಾಳಿನಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ 3,250 ಕೆ.ಜಿ. ಪಡಿತರ ಅಕ್ಕಿ ವಶ



ಕುರುಗೋಡು : ತಾಲೂಕಿನ ಗೆಣಿಕೆಹಾಳು ಗ್ರಾಮದಲ್ಲಿ ಮನೆಯಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಪಡಿತರ ಅಕ್ಕಿಯನ್ನು ಪೊಲೀಸರು ದಾಳಿ ನಡೆಸಿ ವಶಪಡಿಸಿಕೊಂಡಿದ್ದಾರೆ.

ಗ್ರಾಮದ ಸುಭಾನ್ ಶಾಷಾವಲಿ (38) ಎಂಬವರು ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಂಗ್ರಹಿಸಿ, ಬಳಿಕ ಬೇರೆಡೆಗೆ ಸಾಗಿಸಿ ಮಾರಾಟ ಮಾಡಲು ಯತ್ನಿಸುತ್ತಿದ್ದರು ಎನ್ನಲಾಗಿದೆ. ಖಚಿತ ಮಾಹಿತಿ ಮೇರೆಗೆ ಪೊಲೀಸರು ಶನಿವಾರ ರಾತ್ರಿ ದಾಳಿ ನಡೆಸಿದ್ದಾರೆ.

ದಾಳಿಯ ವೇಳೆ 65 ಗೊಬ್ಬರ ಚೀಲಗಳಲ್ಲಿ ಸಂಗ್ರಹಿಸಿದ್ದ ಒಟ್ಟು 3,250 ಕೆ.ಜಿ. ಅಕ್ಕಿ ಪತ್ತೆಯಾಗಿದ್ದು, ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸುಭಾನ್ ಶಾಷಾವಲಿ ಅವರನ್ನು ಬಂಧಿಸಲಾಗಿದೆ.

ಪಿಎಸ್ಐ ಸುಪ್ರಿತ್ ಹಾಗೂ ಸಿಬ್ಬಂದಿ ದಾಳಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ಈ ಕುರಿತು ಕುರುಗೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

# ಮತದಾರರ ಪಟ್ಟಿಗೆ ಹೆಸರು ಸೇರಿಸಿ: ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ




ಬಳ್ಳಾರಿ: 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬ ಯುವಕ-ಯುವತಿಯರು ಹಾಗೂ ಅರ್ಹ ನಾಗರಿಕರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು, ಮತದಾರರ ಗುರುತಿನ ಚೀಟಿ ಪಡೆಯಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್ ಕೆ. ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ಸ್ವೀಪ್ ಸಮಿತಿಯ ಸಂಯುಕ್ತ ಆಶ್ರಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ 2026 ಹಾಗೂ ಸ್ವೀಪ್ ಕಾರ್ಯಕ್ರಮದ ಅಂಗವಾಗಿ ಸಾರ್ವಜನಿಕರಲ್ಲಿ ಮತದಾನದ ಮಹತ್ವ ಮತ್ತು ಜಾಗೃತಿ ಮೂಡಿಸುವ ಉದ್ದೇಶದಿಂದ ಭಾನುವಾರ ನಗರದ ಎನ್‌ಸಿಸಿ ಮೈದಾನದಲ್ಲಿ ಆಯೋಜಿಸಿದ್ದ 4 ಕಿ.ಮೀ. ಮ್ಯಾರಥಾನ್ ಓಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಮತದಾರರ ಪಟ್ಟಿಯಲ್ಲಿ ಅರ್ಹ ವ್ಯಕ್ತಿಗಳ ಹೆಸರು ಕೈಬಿಟ್ಟಿದ್ದರೆ, ಕೂಡಲೇ ಸಂಬಂಧಪಟ್ಟ ಚುನಾವಣಾ ಅಧಿಕಾರಿಗಳ ಗಮನಕ್ಕೆ ತಂದು ಹೆಸರು ನೋಂದಾಯಿಸಿಕೊಳ್ಳಬೇಕು. 18 ವರ್ಷ ಮೇಲ್ಪಟ್ಟ ಅರ್ಹ ಯುವಕರು ಅಕ್ಟೋಬರ್ 1ರಿಂದ ಮತದಾರರ ಪಟ್ಟಿಗೆ ಹೆಸರು ಸೇರಿಸಲು ನೋಂದಣಿ ಮಾಡಿಕೊಳ್ಳಬಹುದು' ಎಂದರು.

ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರೂ ಆದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಮಾತನಾಡಿದರು.

ಎನ್‌ಸಿಸಿ ಮೈದಾನದಿಂದ ಪ್ರಾರಂಭವಾದ ಓಟವು ಸುಧಾ ಕ್ರಾಸ್, ಇನ್‌ಫೆಂಟ್ರಿ ರಸ್ತೆ, ಎಸ್‌ಪಿ ವೃತ್ತದ ಮಾರ್ಗವಾಗಿ ಸಾಗಿ ದುರ್ಗಮ್ಮ ದೇವಸ್ಥಾನದ ಆವರಣಕ್ಕೆ ತಲುಪಿ ಮುಕ್ತಾಯಗೊಂಡಿತು.

ಓಟದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಬಸವರಾಜ ಕೆ.ಎನ್ ಹಾಜರಿದ್ದರು.

# ಸೆ.25ರಿಂದ ಬಳ್ಳಾರಿಯಲ್ಲಿ 'ನಿರ್ಮಾಣ 2026: 77 ಮಳಿಗೆಗಳೊಂದಿಗೆ ಕಟ್ಟಡ ನಿರ್ಮಾಣಕ್ಕೆ ಪಣ




ಬಳ್ಳಾರಿ: ಎಂಜಿನಿಯರ್‌ಗಳು, ಕಟ್ಟಡ ನಿರ್ಮಾಣ ಕ್ಷೇತ್ರದ ತಜ್ಞರು ಹಾಗೂ ವಿವಿಧ ಕಂಪನಿಗಳ ಸಹಯೋಗದಲ್ಲಿ ಆಯೋಜಿಸಿರುವ 'ನಿರ್ಮಾಣ 2026' ಪ್ರದರ್ಶನ ಸೆಪ್ಟೆಂಬರ್ 25ರಿಂದ 27ರವರೆಗೆ ನಗರದ ಐಟಿಐ ಮೈದಾನದಲ್ಲಿ ನಡೆಯಲಿದೆ ಎಂದು ಎಸಿಸಿಯ ಅಧ್ಯಕ್ಷರು ಎ.ಎಸ್ ಸತ್ಯನಾರಾಯಣ ಅವರು ತಿಳಿಸಿದರು.

ಸೋಮವಾರ ತಮ್ಮ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಕಳೆದ ಹಲವು ವರ್ಷಗಳಿಂದ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘಟನೆ ವತಿಯಿಂದ ಪ್ರತಿ ಎರಡು ತಿಂಗಳಿಗೊಮ್ಮೆ ತಾಂತ್ರಿಕ ವಿಚಾರ ಸಂಕಿರಣಗಳನ್ನು ಆಯೋಜಿಸಲಾಗುತ್ತಿದ್ದು, ವಿವಿಧ ಕಂಪನಿಗಳ ತಜ್ಞರಿಂದ ಹೊಸ ತಂತ್ರಜ್ಞಾನ ಮತ್ತು ನಿರ್ಮಾಣ ಸಾಮಗ್ರಿಗಳ ಕುರಿತು ಮಾಹಿತಿ ಪಡೆಯಲಾಗುತ್ತಿದೆ. ಈ ತಂತ್ರಜ್ಞಾನವನ್ನು ಕಟ್ಟಡ ನಿರ್ಮಾಣದಲ್ಲಿ ಅಳವಡಿಸಿಕೊಳ್ಳುವ ಉದ್ದೇಶದಿಂದ 'ನಿರ್ಮಾಣ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಇದು 'ನಿರ್ಮಾಣ'ದ 7ನೇ ಆವೃತ್ತಿಯಾಗಿದ್ದು, 2017ರಿಂದ ವಿವಿಧ ಕಾರಣಗಳಿಂದ ಪರ್ಯಾಯ ವರ್ಷಗಳಲ್ಲಿ ಕಾರ್ಯಕ್ರಮ ನಡೆಸಲಾಗುತ್ತಿದೆ. ಈ ಬಾರಿ ಸುಮಾರು ಒಂದು ಎಕರೆ ಪ್ರದೇಶದಲ್ಲಿ ಜರ್ಮನ್ ವಾಟರ್‌ಪ್ರೂಫ್ ಟೆಂಟ್ ನಿರ್ಮಿಸಿ, ವಿವಿಧ ಕಂಪನಿಗಳ 77 ಮಳಿಗೆಗಳನ್ನು ಸ್ಥಾಪಿಸಲಾಗುತ್ತಿದೆ. ಬಳ್ಳಾರಿ ಮಾತ್ರವಲ್ಲದೆ ಬೆಂಗಳೂರು, ಗೋವಾ, ಚೆನ್ನೈ ಸೇರಿದಂತೆ ವಿವಿಧ ಪ್ರದೇಶಗಳ ಕಂಪನಿಗಳು ಭಾಗವಹಿಸಲಿವೆ ಎಂದರು.

ನಿರ್ಮಾಣ ಕ್ಷೇತ್ರಕ್ಕೆ ಅಗತ್ಯವಾದ ಸಿಮೆಂಟ್, ಸ್ಟೀಲ್, ಎಲೆಕ್ಟ್ರಿಕಲ್, ಪ್ಲಂಬಿಂಗ್, ಇಂಟೀ-ರಿಯರ್, ಎಕ್ಸ್‌ಟೀರಿಯರ್, ಫಸಾಡ್, ಗ್ರಾನೈಟ್, ಮಾರ್ಬಲ್, ಕಿಟಕಿ, ಲಿಫ್ಟ್, ಸೋಲಾರ್ ಹಾಗೂ ವಾಟರ್‌ಪ್ರೂಫಿಂಗ್ ಸೇರಿದಂತೆ ವಿವಿಧ ಉತ್ಪನ್ನಗಳು ಪ್ರದರ್ಶನದಲ್ಲಿ ಲಭ್ಯವಿರಲಿವೆ. ಎಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸೆ.25 ಮತ್ತು 26ರಂದು ವಿವಿಧ ತಾಂತ್ರಿಕ ವಿಚಾರಗಳ ಕುರಿತು ವಿಶೇಷ ಸೆಮಿನಾರ್‌ಗಳನ್ನು ಆಯೋಜಿಸಲಾಗಿದೆ. ಬೆಂಗಳೂರು, ಗೋವಾ ಹಾಗೂ ಚೆನ್ನೈನಿಂದ ತಜ್ಞರು ಆಗಮಿಸಿ ವಿಷಯ ಮಂಡಿಸಲಿದ್ದಾರೆ.

# ವಿದ್ಯುತ್ ವಿತರಣಾ ಕೇಂದ್ರಕ್ಕೆ ರೈತರ ಮುತ್ತಿಗೆ

## ಸಮರ್ಪಕ ಕರೆಂಟ್ ಪೂರೈಸಲು ಒತ್ತಾಯ | ಅಧಿಕಾರಿಗಳ ನಿರ್ಲಕ್ಷಕ್ಕೆ ಆಕ್ರೋಶ



ಹೂವಿನಹಡಗಲಿ: ಸಮರ್ಪಕ ವಿದ್ಯುತ್ ಪೂರೈಸುವಂತೆ ಒತ್ತಾಯಿಸಿ ಗಿರಿಯಾಪುರ ಮಠದ ವಿದ್ಯುತ್ ವಿತರಣಾ ಕೇಂದ್ರಕ್ಕೆ ರೈತರು ಭಾನುವಾರ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಬರಗಾಲದಿಂದ ಬೆಳೆ ಉಳಿಸಿಕೊಳ್ಳಲು ಪರದಾಡುತ್ತಿರುವ ಸಂದರ್ಭದಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಮಾಡುವ ಮೂಲಕ ರೈತರ ಬದುಕನ್ನು ಕಸಿದುಕೊಳ್ಳುವ ಕೆಲಸವನ್ನು ಜೆಸ್ಕಾಂ ಮಾಡುತ್ತಿದೆ. ರೈತರ ಪಂಪ್‌ಸೆಟ್‌ಗಳಿಗೆ ನಿರಂತರ 7ತಾಸು ವಿದ್ಯುತ್ ವಿತರಿಸಬೇಕೆಂಬ ಸರ್ಕಾರದ ನಿಯಮವಿದ್ದರೂ, ಜೆಸ್ಕಾಂ ಇಲಾಖೆ ಅಧಿಕಾರಿಗಳು ಮತ್ತು ಲೈನ್‌ಮೈನ್‌ಗಳ ಕಳ್ಳಾಟದಿಂದ ರೈತರ ಪಂಪ್‌ಸೆಟ್‌ಗಳಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆಯಾಗುತ್ತಿಲ್ಲ.

ದಿನಕ್ಕೆ ಕೇವಲ 5ರಿಂದ 6ತಾಸು ವಿದ್ಯುತ್ ಪೂ-ರೈಕೆ ಮಾಡಲಾಗುತ್ತಿದೆ. ಈ ಸಮಯದಲ್ಲಿ ವಿದ್ಯುತ್ ಪೂರೈಕೆಯಾಗದೆ ಸಮಸ್ಯೆಯಾದರೆ ಜೆಸ್ಕಾಂ ಸಿಬ್ಬಂದಿ ಇದಕ್ಕೆ ಸ್ಪಂದಿಸುತ್ತಿಲ್ಲ. ಬರ ಹಿನ್ನೆಲೆ ಹಗಲು ರಾತ್ರಿ ಅಡವಿಯಲ್ಲಿದ್ದು ಬೆಳೆಗಳಿಗೆ ನೀರುಣಿಸುವ ಕಾರ್ಯ ಮಾಡುತ್ತಿದ್ದೇವೆ. ಆದರೆ ಅಧಿಕಾರಿಗಳು ತಮಗೆ ತಿಳಿದಂತೆ ವಿದ್ಯುತ್ ಪೂರೈಸುತ್ತಿದ್ದಾರೆ ಎಂದು ಆರೋಪಿಸಿದರು. ಗಿರಿಯಾಪುರ, ಗಿರಿಯಾಪುರ ಮಠ, ನಂದಿಗಾವಿ, ಕತ್ತೆಬೆನ್ನೂರು, ಬ್ಯಾಲಹುಣ್ಸಿ, ನಂದಿಗಾವಿ ಗ್ರಾಮಗಳ ರೈತರು ಹಾಗೂ ಜೆಸ್ಕಾಂ ಎಇಇ ಕೇದಾರನಾಥ ಮತ್ತು ಜೆಸ್ಕಾಂ ಇಲಾಖೆ ಸಿಬ್ಬಂದಿ ಇತರರಿದ್ದರು.

# ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ



ರಾಂಪುರ: ಜನರ ಸಮಸ್ಯೆಗಳ ಪರಿಹಾರದಲ್ಲಿ ಉದಾಸೀನತೆ ತೋರದೆ ಶೀಘ್ರ ಇತ್ಯರ್ಥಗೊಳಿಸಲು ಅಧಿಕಾರಿಗಳು ಮುಂದಾಗಬೇಕು ಎಂದು ಶಾಸಕ ಉಮೇಶ ಮೇಟಿ ಹೇಳಿದರು.

ಸಮೀಪದ ತಿಮ್ಮಾಪುರ ಗ್ರಾಮದಲ್ಲಿ ಶನಿವಾರ ನಡೆದ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಜನರು ತಾಲ್ಲೂಕು ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಿ, ಗ್ರಾಮದಲ್ಲಿಯೇ ಸಂಬಂಧಿತ ಇಲಾಖೆಗಳ ಸಿಬ್ಬಂದಿಗೆ ಅಹವಾಲು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ' ಎಂದರು.

ರಾಂಪುರ ಹಾಗೂ ಬೇವೂರಿನಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಸ್ವೀಕೃತವಾಗಿದ್ದ 193 ಅರ್ಜಿಗಳ ಪೈಕಿ 159 ಅರ್ಜಿಗಳಿಗೆ ಪರಿಹಾರ ಕಲ್ಪಿಸಲಾಗಿದೆ. ಬಾಕಿಯಿರುವ ಮನವಿಗಳನ್ನೂ ತ್ವರಿತವಾಗಿ ಪರಿಶೀಲಿಸಿ ಇತ್ಯರ್ಥಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬಸವಂತಪ್ಪ ಮೇಟಿ, ಗ್ರಾಮೀಣ ಜನರ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಸ್ಪಂದಿಸುವ ವ್ಯವಸ್ಥೆಯಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತಿದೆ. ಅರ್ಹರಿಗೆ ಸರ್ಕಾರಿ ಸೌಲಭ್ಯಗಳು ವಿಳಂಬವಿಲ್ಲದೆ ತಲುಪುವಂತೆ ಸಂಬಂಧಿಸಿದ ಇಲಾಖೆಗಳು ಕ್ರಮ ವಹಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಆರೋಗ್ಯ ಕಿಟ್, ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್, ಸುಕನ್ಯಾ ಸಮೃದ್ಧಿ ಯೋಜನೆಯ ಫಲಾನುಭವಿಗಳಿಗೆ ಪಾಸ್‌ಬುಕ್ ವಿತರಿಸಲಾಯಿತು.

ಪಿಕೆಪಿಎಸ್ ಅಧ್ಯಕ್ಷ ಮಲ್ಲಿಕಾರ್ಜುನ ಮೇಟಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಎಸ್.ಎನ್.ರಾಂಪುರ, ತಹಶೀಲ್ದಾರ್ ವಾಸುದೇವ ಸ್ವಾಮಿ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸುಭಾಸ ಸಂಪಗಾವಿ, ಬಲರಾಮ ಪವಾರ ಇದ್ದರು.

# ರಾಷ್ಟ್ರೀಯ ಕರಾಟೆ ಕ್ರೀಡಾಕೂಟದಲ್ಲಿ ವಿಜಯಪುರದ ಕ್ರೀಡಾಪಟುಗಳ ಸಾಧನೆ

## 11 ಪದಕಗಳ ಬೇಟೆ: 1 ಚಿನ್ನ, 6 ಬೆಳ್ಳಿ, 4 ಕಂಚು



ವಿಜಯಪುರ : ಹೈದರಾಬಾದ್‌ನ ಕಟೆಡನ್ ಕ್ರೀಡಾ ಸಂಕೀರ್ಣದಲ್ಲಿ ಸೆ. 20ರಂದು ನಡೆದ ರಾಷ್ಟ್ರೀಯ ಕರಾಟೆ ಕ್ರೀಡಾಕೂಟದಲ್ಲಿ ವಿಜಯಪುರದ ಕರಾಟೆ ಕ್ರೀಡಾಪಟುಗಳು ಒಟ್ಟು 11 ಪದಕಗಳನ್ನು ಗೆದ್ದು ಗಮನಾರ್ಹ ಸಾಧನೆ ಮಾಡಿದ್ದಾರೆ.

ಬಾಲಕ, ಬಾಲಕಿಯರು ಹಾಗೂ ಪುರುಷರ ವಿವಿಧ ವಯೋಮಿತಿ ಮತ್ತು ಬೆಲ್ಟ್ ವಿಭಾಗಗಳಲ್ಲಿ ಸ್ಪರ್ಧಿಸಿದ ವಿಜಯಪುರದ ಕ್ರೀಡಾಪಟುಗಳು ಒಂದು ಚಿನ್ನ, ಆರು ಬೆಳ್ಳಿ ಹಾಗೂ ನಾಲ್ಕು ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಪುರುಷರ ಬ್ಲ್ಯಾಕ್ ಬೆಲ್ಟ್ ಕಥಾ ವಿಭಾಗದಲ್ಲಿ 48 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ಬಸವರಾಜ ಎನ್. ಬಾಗೇವಾಡಿ ಚಿನ್ನದ ಪದಕ ಗೆದ್ದಿದ್ದಾರೆ.

ಬೆಳ್ಳಿ ಪದಕ ಪಡೆದವರಲ್ಲಿ ಬಾಲಕರ 8 ವರ್ಷದೊಳಗಿನ ಹಸಿರು ಬೆಲ್ಟ್ ಕಥಾ ವಿಭಾಗದ ಅಬ್ದುಲ್ ವಾಹಿದ್ ಆರ್. ಜಮಾದಾರ್, 12 ವರ್ಷದೊಳಗಿನ ಕೇಸರಿ ಬೆಲ್ಟ್ ಕಥಾ ವಿಭಾಗದ ತೇಜಸ್ ಆರ್. ಕೋಳಿ, ಬಾಲಕಿಯರ 13 ವರ್ಷದೊಳಗಿನ ಕೇಸರಿ ಬೆಲ್ಟ್ ಕಥಾ ವಿಭಾಗದ ಪ್ರತೀಕ್ಷಾ ಪಿ. ಪೋತದಾರ ಹಾಗೂ ಸಂಜೀವನಿ ಟಿ. ಶಿಂಧೆ, 16 ವರ್ಷದೊಳಗಿನ ಹಸಿರು ಬೆಲ್ಟ್ ಕಥಾ ವಿಭಾಗದ ಕೃತಿಕಾ ಎನ್. ಹೊಟ್ಕರ ಮತ್ತು 17 ವರ್ಷದೊಳಗಿನ ಕೇಸರಿ ಬೆಲ್ಟ್ ಕಥಾ ವಿಭಾಗದ ಶಿವಾನಿ ಎಸ್. ಘಾಟಗೆ ಇದ್ದಾರೆ.

ಕಂಚಿನ ಪದಕವನ್ನು ಬಾಲಕಿಯರ 13 ವರ್ಷದೊಳಗಿನ ಹಸಿರು ಬೆಲ್ಟ್ ಕಥಾ ವಿಭಾಗದಲ್ಲಿ ಪೂರ್ಣಿಮಾ ಎನ್. ಕಾಂಬಳೆ, 14 ವರ್ಷದೊಳಗಿನ ಹಸಿರು ಬೆಲ್ಟ್ ಕಥಾ ವಿಭಾಗದಲ್ಲಿ ವೈಭವಿ ಎನ್. ಕಾಂಬಳೆ, 14 ವರ್ಷದೊಳಗಿನ ಕೇಸರಿ ಬೆಲ್ಟ್ ಕಥಾ ವಿಭಾಗದಲ್ಲಿ ಪಲ್ಲವಿ ಎಸ್. ಕುಂಬಾರ ಹಾಗೂ 17 ವರ್ಷದೊಳಗಿನ ಕೇಸರಿ ಬೆಲ್ಟ್ ಕಥಾ ವಿಭಾಗದಲ್ಲಿ ಪೂನಂ ವಿ. ಜಾಧವ ಗೆದ್ದಿದ್ದಾರೆ.

ಕ್ರೀಡಾಪಟುಗಳ ಸಾಧನೆಗೆ ಕ್ರೀಡಾಕೂಟದ ಆಯೋಜಕರು ಹಾಗೂ ನಿರ್ಣಾಯಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಮುಖ್ಯ ತರಬೇತುದಾರರಾದ ಉತ್ನಾಳ ಗ್ರಾಮದ ಬಸವರಾಜ ಎನ್. ಬಾಗೇವಾಡಿ ಹಾಗೂ ಶಾಖಾ ತರಬೇತುದಾರ ರಿಯಾಜ್ ಎಂ. ಜಮಾದಾರ್ ಅವರು ಪದಕ ವಿಜೇತ ಕ್ರೀಡಾಪಟುಗಳೊಂದಿಗೆ ಹಾಜರಿದ್ದರು.

ರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಉತ್ತಮ ಸಾಧನೆ ಮಾಡಿ ವಿಜಯಪುರ ಜಿಲ್ಲೆಗೆ ಕೀರ್ತಿ ತಂದ ಕ್ರೀಡಾಪಟುಗಳಿಗೆ ಕ್ರೀಡಾಭಿಮಾನಿಗಳು ಅಭಿನಂದನೆ ಸಲ್ಲಿಸಿದ್ದಾರೆ.

# ಲೋಕ ಅದಾಲತ್‌ನಲ್ಲಿ 447 ಪ್ರಕರಣಗಳು ಇತ್ಯರ್ಥ: ನ್ಯಾಯಾಧೀಶ ಸಣಮನಿ



ರಬಕವಿ ಬನಹಟ್ಟಿ: ಲೋಕ ಅದಾಲತ್‌ನಲ್ಲಿ ಸಮಸ್ಯೆಗಳನ್ನು ಬಗೆಹರಿಸಿಕೊಂಡರೆ ಕಕ್ಷಿದಾರರಲ್ಲಿ ಪರಸ್ಪರ ಸಾಮರಸ್ಯ ಸಾಧ್ಯ. ಇದ-ರಿಂದ ನ್ಯಾಯಾಲಯದ ಬಹಳಷ್ಟು ಕೆಲಸವು ಉಳಿಯುತ್ತದೆ. ಲೋಕ ಅದಾಲತ್‌ನಲ್ಲಿ ಒಟ್ಟು 447 ಪ್ರಕರಣಗಳು ಇತ್ಯರ್ಥಗೊಂಡಿವೆ ಎಂದು ನ್ಯಾಯಾಧೀಶ ಆಶಪ್ಪ ಸಣಮನಿ ತಿಳಿಸಿದರು.

ಸ್ಥಳೀಯ ನ್ಯಾಯಾಲಯದಲ್ಲಿ ನಡೆದ ಲೋಕ ಅದಾಲತ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಲಯದ 434 ಪ್ರಕರಣಗಳಲ್ಲಿ 41 ಪ್ರಕರಣ ಇತ್ಯರ್ಥಗೊಂಡಿದ್ದು, 1,64,40,532 ಮೊತ್ತವನ್ನು ಸಂದಾಯ ಮಾಡಲಾಗಿದೆ ಎಂದು ತಿಳಿಸಿದರು.ಕಿರಿಯ ಶ್ರೇಣಿಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ166 ಪ್ರಕರಣಗಳು ಇತ್ಯರ್ಥಗೊಂಡಿದ್ದು,38,32,394 ಮೊತ್ತವನ್ನು ಸಂದಾಯ ಮಾಡಲಾಯಿತು ಎಂದು ನ್ಯಾಯಾಧೀಶೆ ಸೌಮ್ಯ ಹೂಲಿ ತಿಳಿಸಿದರು.

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ 240 ಪ್ರಕರಣಗಳು ಇತ್ಯರ್ಥಗೊಂಡಿ-ದ್ದು, 7,28,941 ಮೊತ್ತವನ್ನು ಸಂದಾಯ ಮಾಡಲಾಯಿತು ಎಂದು ನ್ಯಾಯಾಧೀಶೆ ಮಾಫ್ರಿದ್ ಡಿಯಾಸ್ ತಿಳಿಸಿದರು.

ಹಲವು ವರ್ಷಗಳಿಂದ ದೂರಾದ ದಂಪತಿಗಳು ನ್ಯಾಯಾಧೀಶರಲ್ಲಿ ಸಮ್ಮುಖದಲ್ಲಿ ಮತ್ತೆ ಒಂದಾಗಿ ಹಾರ ಬದಲಾಯಿಸಿಕೊಂಡರು. ವಕೀಲರಾದ ಪಿ.ಎಸ್.ತಳವಾರ, ಮಹೇಶ ಕೆ-ಂದೂಳಿ, ಶಿಲ್ಪಾ ಗೌಡಪ್ಪನವರ ಇದ್ದರು.

ವಕೀಲರ ಸಂಘದ ಅಧ್ಯಕ್ಷ ಶ್ರೀಕಾಂತ ಕುಲಕರ್ಣಿ, ಕಾರ್ಯದರ್ಶಿ ರವಿ ಸಂಪಗಾವಿ, ವಕೀಲರಾದ ಎಂ.ಜಿ.ಕೆರೂರ, ಹರ್ಷವರ್ಧನ ಪಟವರ್ಧನ, ಬಸು ಬುಜರುಕ್, ಜಿ.ಡಿ.ಪಾಟೀಲ, ಎಸ್.ಎ.ಪಾಟೀಲ, ಅರ್ಜುನ ಜಿಡ್ಡಿಮನಿ, ಕಾಡೇಶ ನ್ಯಾಮಗೌಡ, ವಿನೋದ ಖೇಮನ್ನವರ, ಪ್ರಸನ್ನ ಬಾಣಕಾರ, ಮುಕುಂದು ಕೋಪರ್ಡೆ ಇದ್ದರು.

# ದಾಸ ಸಾಹಿತ್ಯ ವಿಶ್ವದೆಲ್ಲೆಡೆ ಪಸರಿಸಲಿ: ಬಿ.ವಿ.ಕೆ.ಶಾಸ್ತ್ರಿ



ಬಾಗಲಕೋಟೆ: ದಾಸ ಸಾಹಿತ್ಯವನ್ನು ಸ್ಥಳೀಯವಾಗಿ ಸೀಮಿತಗೊಳಿಸದೇ ವಿಶ್ವದೆಲ್ಲೆಡೆ ಹರಡುವ ಕಾರ್ಯ ಆಗಬೇಕಿದೆ ಎಂದು ಅಮೆರಿಕದ ಫ್ಲೋರಿಡಾದಲ್ಲಿರುವ ಯೋಗ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಬಿ.ವಿ.ಕೆ.ಶಾಸ್ತ್ರಿ ಹೇಳಿದರು.

ನವನಗರದ ಪ್ರಸನ್ನವೆಂಕಟದಾಸರ ಸ್ಮಾರಕ ಭವನದಲ್ಲಿ ಭಾನುವಾರದಿಂದ ಮೂರು ದಿನಗಳ ಕಾಲ ಹಮ್ಮಿಕೊಂಡಿರುವ ಅಖಿಲ ಕರ್ನಾಟಕ ಹರಿದಾಸ ಸಾಹಿತ್ಯ ಸಮ್ಮೇಳನದಲ್ಲಿ ಅಖಿಲ ಕರ್ನಾಟಕ ಹರಿದಾಸ ಸಾಹಿತ್ಯ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಗೆ ತಮ್ಮ ಯೋಗ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತಾ ಪತ್ರವನ್ನು ವಿತರಿಸಿ ಮಾತನಾಡಿದರು.

ಮಾತನಾಡುವ ಮೂಲಕ ಕೆಲ ಕ್ಷಣಗಳವರೆಗೆ ನೆನಪಿನಲ್ಲಿರಿಸಬಹುದು. ಆದರೆ, ಬರವಣಿಗೆಯ ಮೂಲಕ ಶಾಶ್ವತವಾಗಿ ದಾಖಲಿಸಬಹುದು. ತಲೆಮಾರಿನಿಂದ ತಲೆಮಾರಿಗೆ ತಲುಪಿಸಬಹುದು. ದಾಸ ಸಾಹಿತ್ಯದ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಇನ್ನಷ್ಟು ಆಗಬೇಕಿದೆ ಎಂದರು.

ಪಂ.ಬಿಂದುಮಾಧವಾಚಾರ್ಯ ನಾಗಸಂಪಿಗೆ ಮಾತನಾಡಿ, ಮಠಕ್ಕೆ ಬಂದವರನ್ನು ಗುರುಗಳು ಉದ್ಧರಿಸುತ್ತಾರೆ. ಮಠಕ್ಕೆ ಬಾರದವರನ್ನು ಕಾಲಿಗೆ ಗೆಜ್ಜೆಕಟ್ಟಿ ಹೆಜ್ಜೆಹಾಕುವುದರ ಮೂಲಕ ದಾಸರು ಉದ್ಧಾರ ಮಾಡುತ್ತಾರೆ ಎಂಬ ಮಾತಿದೆ. ಬಹುಪಾಲು ದಾಸರ ಬದುಕು ಅವಮಾನದಿಂದ ಅನುಗ್ರಹದ ಕಡೆಗೆ ಸಾಗಿದೆ. ಸಮಾಜವನ್ನು ಜಾಗೃತಗೊಳಿಸುವ ಕೆಲಸ ಮಾಡಿದ್ದಾರೆ ಎಂದು ಹೇಳಿದರು.ಪ್ರಸನ್ನವೆಂಕಟ ವ್ಯಾಸ-ದಾಸ ಸಾಹಿತ್ಯ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸಂಶೋಧಕ ಧೂಳಖೇಡ ನಾರಾಯಣಾಚಾರ್ಯ, ಬಾಲ್ಯದಲ್ಲಿ ಬಡತನ ಕಂಡಿದ್ದೇನೆ. ಪೇಜಾವರ ಶ್ರೀಗಳು ನಮ್ಮ ಬಾಳಿಗೆ ಬೆಳಕಾದರು. ನನ್ನ ಜೀವನದಲ್ಲಿ ಸಾಧನೆಗೆ ಅವರೇ ಕಾರಣ ಎಂದರು.

ಸಂಘಟಕ ಸುಭಾಸ ಕಾಖಂಡಕಿ ಮಾತನಾಡಿ, ಪ್ರಸನ್ನವೆಂಕಟ ದಾಸರ ಸ್ಮಾರಕ ಭವನದ ಮೇಲ್ಭಾಗದಲ್ಲಿ ಸಂಶೋಧನಾ ಮತ್ತು ಅಧ್ಯಯನ ಕೇಂದ್ರ ತೆರೆಯಲಾಗಿದೆ. ಅತ್ಯಾಧುನಿಕ ಗ್ರಂಥಾಲಯದ ವ್ಯವಸ್ಥೆಯಿದೆ. ಸಂಶೋಧಕರಿಗೆ ಸಕಲ ವ್ಯವಸ್ಥೆ ಕಲ್ಪಿಸಲಾಗಿದೆ. ಅಮೇರಿಕದ ಯೋಗ ಸಂಸ್ಕೃತ ವಿಶ್ವವಿದ್ಯಾಲಯವು ಮಾನ್ಯತೆಯನ್ನೂ ನೀಡಿದೆ ಎಂದರು. ಎನ್.ಜಿ.ವಿಜಯಲಕ್ಷ್ಮಿ ಅವರಿಗೆ ಪ್ರಸನ್ನವೆಂಕಟದಾಸ ಸಾಹಿತ್ಯರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.ಸಂಶೋಧಕ ಕೃಷ್ಣ ಕೋಲ್ಹಾರ ಕುಲಕರ್ಣಿ, ಕಬ್ಬಿನಾಲೆ ವಸಂತಭಾರಧ್ವಾಜ, ಸಮ್ಮೇಳನಾಧ್ಯಕ್ಷ ಸ್ವಾಮಿರಾವ್ ಕುಲಕರ್ಣಿ ಇದ್ದರು. ಆರ್ಯ ಅಕ್ಷೋಭ್ಯತೀರ್ಥ ಮಠಾಧೀಶ ರಘುವಿಜಯತೀರ್ಥ ಸ್ವಾಮೀಜಿ ಪ್ರವಚನ ನೀಡಿ-ದರು.

# ಮರೆಯಾದ ಮುಂಗಾರು

ಚಿಕ್ಕಮಗಳೂರು: ಮುಂಗಾರು ಮಾರುತಗಳು ಕೊನೆಯ ದಿನಗಳಲ್ಲಿದ್ದು, ಜಿಲ್ಲೆಯಲ್ಲಿ ಈ ವರ್ಷ ಬರಗಾಲದ ಪರಿಸ್ಥಿತಿಯನ್ನು ಉಳಿಸಿ ಹೊರಟಿವೆ. ಕಳೆದ 50 ವರ್ಷಗಳ ಮಳೆ ಅಂಕಿ ಅಂಶ ಗಮನಿಸಿದರೆ ಮಳೆ ಕಡಿಮೆಯಾಗಿರುವ ಐದನೇ ವರ್ಷ ಇದಾಗಿದೆ. ಮಳೆ ಕೊರತೆಯಿಂದ ಮುಂಗಾರು ಹಂಗಾಮಿನ ಬಿತ್ತನೆ ಶೇ 39ರಷ್ಟು ಮಾತ್ರ ಸಾಧ್ಯವಾಗಿದ್ದು, ಅವು ಕೂಡ ನೆಲ ಕಚ್ಚಿವೆ.

# ಮೂಡಲಗಿ ವೇಮನ್ ಸೊಸೈಟಿಗೆ 3.06 ಕೋಟಿ ಲಾಭ



ಮೂಡಲಗಿ: ಮೂಡಲಗಿಯ ವೇಮನ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿಯು 2025-26ನೇ ಆರ್ಥಿಕ ವರ್ಷದ ಅಂತ್ಯಕ್ಕೆ 3.06 ಕೋಟಿ ಲಾಭ ಗಳಿಸಿದ್ದು, ಪ್ರಗತಿಯತ್ತ ಸಾಗುತ್ತಿದೆ ಎಂದು ಸೊಸೈಟಿ ಅಧ್ಯಕ್ಷ ಸಂತೋಷ ಸೋನವಾಲಕರ ಹೇಳಿದರು.

ನಗರದಲ್ಲಿ ನಡೆದ ಸೊಸೈಟಿಯ ವಾರ್ಷಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸೊಸೈಟಿಯು ಪ್ರಸ್ತುತ 3.57 ಕೋಟಿ ಷೇರು ಬಂಡವಾಳ, 12.30 ಕೋಟಿ ನಿಧಿ ಹಾಗೂ 208.96 ಕೋಟಿ ದುಡಿಯುವ ಬಂಡವಾಳ ಹೊಂದಿದೆ. 183.62 ಕೋಟಿ ಠೇವಣಿ ಸಂಗ್ರಹಿಸಿದ್ದು, 78.13 ಕೋಟಿ ಹೂಡಿಕೆ ಮಾಡಲಾಗಿದೆ. ಸದಸ್ಯರಿಗೆ 114.24 ಕೋಟಿ ಸಾಲ ವಿತರಿಸಲಾಗಿದೆ. ಸೊಸೈಟಿಯ ಒಟ್ಟು ವಾರ್ಷಿಕ ವಹಿವಾಟು 946.14 ಕೋಟಿ ಆಗಿದ್ದು, ಷೇರುದಾರರಿಗೆ ಶೇ 13ರಷ್ಟು ಲಾಭಾಂಶ ಘೋಷಿಸಲಾಗಿದೆ ಎಂದು ತಿಳಿಸಿದರು.

ಸೊಸೈಟಿಯು ವಿವಿಧೆಡೆ ಎಂಟು ಶಾಖೆಗಳನ್ನು ಆರಂಭಿಸಿದ್ದು, ಎಲ್ಲ ಶಾಖೆಗಳೂ ಉತ್ತಮ ಪ್ರಗತಿ ಸಾಧಿಸುತ್ತಿವೆ. ಸೊಸೈಟಿಯು ಆಡಿಟ್‌ನಲ್ಲಿ 'ಅ' ಶ್ರೇಣಿ ಪಡೆದಿದ್ದು, ಉತ್ತಮ ಸಹಕಾರಿ ಸಂಸ್ಥೆ ಎಂಬ ಪ್ರಶಸ್ತಿಯನ್ನೂ ಪಡೆದು-ಕೊಂಡಿದೆ ಎಂದು ಸಂತೋಷ ಸೋನವಾಲಕರ ಹೇಳಿದರು.

ಮುಖ್ಯ ಅತಿಥಿಯಾಗಿದ್ದ ನಿವೃತ್ತ ಪ್ರಾಚಾರ್ಯ ಪ್ರೊ. ಸಂಗಮೇಶ ಗುಜಗೊಂಡ ಮಾತನಾಡಿ, ಸಹಕಾರಿ ಸಂಘಗಳ ಯಶಸ್ಸಿಗೆ ಸದಸ್ಯರ ನಂಬಿಕೆ ಮತ್ತು ವಿಶ್ವಾಸ ಪ್ರಮುಖವಾಗಿದೆ. ವೇಮನ ಸೊಸೈಟಿಯು ಈ ನಂಬಿಕೆಯನ್ನು ಉಳಿಸಿಕೊಂಡು ಸದಸ್ಯರು ಹಾಗೂ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ ಎಂದು ಹೇಳಿದರು.

ಸಭೆಯಲ್ಲಿ ಶಂಕರ ಸೋನವಾಲಕರ, ಜಿ.ಟಿ. ಸೋನವಾಲಕರ, ರಮೇಶ ಪ್ಯಾಟಿಗೌಡರ, ಸೊಸೈಟಿ ಉಪಾಧ್ಯಕ್ಷ ಹಣಮಂತ ಪ್ಯಾಟಿಗೌಡರ, ನಿರ್ದೇಶಕರಾದ ವಿಜಯ ಸೋನವಾಲಕರ, ಪಾಂಡು ಸೋನವಾಲಕರ, ತಮ್ಮಣ್ಣ ಝುಂಡೇಕುರಬರ, ಹಣಮಂತ ದಂಡಪ್ಪನ್ನವರ ಸೇರಿದಂತೆ ಎಂಟು ಶಾಖೆಗಳ ಪದಾಧಿಕಾರಿಗಳು ಹಾಗೂ ಬಸವರಾಜ ಟಿ., ಶಿವಬಸು ಶೆಟ್ಟರ್ ಉಪಸ್ಥಿತರಿದ್ದರು.

# ರೈತರ ಬೆಳೆ ಪರಿಹಾರ, ಸಾಲಮನ್ನಾ

## ಕೆರೆಗಳಿಗೆ ನೀರು ತುಂಬಿಸಲು ಸರ್ಕಾರಕ್ಕೆ ಆಗ್ರಹ



ವಿಜಯಪುರ : ನಗರದ ಜೆಡಿಎಸ್ ಘಟಕದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಆಯ್ಕೆ ಮತ್ತು ಪಕ್ಷ ಸಂಘಟನೆಯ ಕುರಿತು ಜೆಡಿಎಸ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ನಗರ ಘಟಕದ ಅಧ್ಯಕ್ಷರಾಗಿ ಪ್ರಶಾಂತ ಕಿಣಗಿ ಅವರನ್ನು ಮುಂದುವರಿಸುವಂತೆ ಸಭೆಯಲ್ಲಿ ಸರ್ವಾನುಮತದಿಂದ ಮನವಿ ಸಲ್ಲಿಸಲಾಯಿತು.ನಗರ ಘಟಕದ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಗಾಗಿ ವೀಕ್ಷಕರನ್ನಾಗಿ ನೇಮಕಗೊಂಡಿದ್ದ ಡಾ. ಸಿ.ಎಸ್. ಸೋಲಾಪೂರ ಮತ್ತು ಮುತ್ತುರಾಜ ಜಂಗಮಶೆಟ್ಟಿ ಅವರ ಪೈಕಿ ಮುತ್ತುರಾಜ ಜಂಗಮಶೆಟ್ಟಿ ಅವರ ನೇತೃತ್ವದಲ್ಲಿ ವೀಕ್ಷಕರ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ರೈತ ನಾಯಕ ಪಂಚಪ್ಪ ಕಲ್ಬುರ್ಗಿ ಮಾತನಾಡಿ, ನಗರದ ಎಲ್ಲ ವಾರ್ಡ್‌ಗಳಲ್ಲಿ ಪಕ್ಷದ ಪದಾಧಿಕಾರಿಗಳನ್ನು ನೇಮಿಸಿ ಸಂಘಟನೆಯನ್ನು ಬಲಪಡಿಸುವಂತೆ ಸೂಚಿಸಿದರು. ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಅಪ್ಪುಗೌಡ ಪಾಟೀಲ ಮಾತನಾಡಿ, ನಗರದಲ್ಲಿ ಪಕ್ಷವನ್ನು ಯಾವ ರೀತಿಯಲ್ಲಿ ಸಂಘಟಿಸಬೇಕು ಎಂಬುದರ ಕುರಿತು ಸಲಹೆ ನೀಡಿ-ದರು. ಅಪರಾಬೇಗಂ ಚಪ್ಪರಬಂದ್ ಮಾತನಾಡಿ, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಂತೆ ಕರೆ ನೀಡಿದರು. ರೈತರ ಸಮಸ್ಯೆಗಳ ಪರಿಹಾರಕ್ಕೆ ನಿರ್ಣಯ

ಜಿಲ್ಲೆಯಲ್ಲಿ ತೀವ್ರ ಬರಗಾಲದ ಹಿನ್ನೆಲೆಯಲ್ಲಿ ರೈತರಿಗೆ ಬೆಳೆ ಪರಿಹಾರ ಒದಗಿಸುವುದು, ಸಾಲಮನ್ನಾ ಮಾಡುವುದು, ಮೇವು ಬ್ಯಾಂಕ್‌ಗಳನ್ನು ಸ್ಥಾಪಿಸುವುದು ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ರೈತರ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಿ ಸಭೆಯಲ್ಲಿ ಒಕ್ಕೊರಲಿನಿಂದ ನಿರ್ಣಯ ಕೈಗೊಳ್ಳಲಾಯಿತು. ಅಲ್ಲದೆ, ಕೆರೆಗಳಿಗೆ ನೀರು ತುಂಬಿಸುವ ಯೋಜನೆಯನ್ನು ತಕ್ಷಣವೇ ಕಾರ್ಯರೂಪಕ್ಕೆ ತರುವಂತೆ ಸರ್ಕಾರಕ್ಕೆ ಆಗ್ರಹಿಸಲಾಯಿತು. ಸಭೆಯಲ್ಲಿ ರಾಜು ಹಿಪ್ಪರಗಿ, ಖಾದ್ರಿ ಇನಾಂದಾರ ಮತ್ತು ಮಲ್ಲು ತೊರವಿ ಅವರು ಪಕ್ಷ ಸಂಘಟನೆ ಕುರಿತು ಮಾತನಾಡಿದರು. ರಾಜು ಹಿಪ್ಪರಗಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಖಾದ್ರಿ ಇನಾಂದಾರ ವಂದಿಸಿದರು. ಈ ಸಂದರ್ಭದಲ್ಲಿ ಖಾದಿ ಪಟೇಲ, ಸಂಜು ಹಿರೇಮಠ, ವಾಜೀದ ಖಾಜಿ,ಇತರರು ಇದ್ದರು. ಡಾ. ಪ್ರಕಾಶ ಹೆರಕಲ್, ಡಾ. ಸಿದ್ದನಗೌಡ ಪಾಟೀಲ, ಸಂಜು ದೊಡಮನಿ, ಡಾ. ಮಲ್ಲಿಕಾರ್ಜುನ ಶಿರೂರ, ಶಿವಲಿಂಗ ಕಿಣಗಿ, ಬಾಬು ಶಿರಣಗಾರ, ಹುಸೇನ ಭಾಗಾಯತ ಸೇರಿದಂತೆ ಜೆಡಿಎಸ್ ಕಾರ್ಯಕರ್ತರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಅನಂತ ಜನಶಕ್ತಿ ಕನ್ನಡ ದಿನ ಪತ್ರಿಕೆಯನ್ನು ತಪ್ಪದೇ ಓದಿ ಹಾಗೂ ಚಂದಾದಾರರಾಗಿ ಪ್ರೋತ್ಸಾಹಿಸಿ**

EDITOR : S VENKATESULU, D.NO.: 4/38, MAIN ROAD, SETTUR, ANANTHAPUR, ANDHRA PRADESH - 515767, PUBLISHER : S VENKATESULU 237, Ward No 22 Talur Road, Lingamma Compund, Bellary, Bellary, Karnataka - 583101. KARNATAKA - 583113.
OWNER : S VENKATESULU D.NO.: 4/38, MAIN ROAD, SETTUR, ANANTHAPUR, ANDHRA PRADESH - 515767. PRINTER: VADDARA DODDA VEERESH, 1ST WARD, NAYAKARA ONI, AGASARA ONI, AT/POST-SOMALAPURA, BELLARY, KARNATAKA - 583101.